ಮಾಡದೆ ಇದ್ದರೂ, ಸರ್ಕಾರದ ಹತೋಟಿ ಈ ವ್ಯಾಪಾರದ ಮೇಲೆ ಇರಬೇಕು. ಓವರ್ ಸ್ಟಾಕ್ ಯಾವತ್ತೂ ಇಟ್ಟುಕೊಂಡಿರಬೇಕು. ಹಿಂದೆ ಪುಣ್ಯಾತ್ಮರು ದೊಡ್ಡದೊಡ್ಡ ರೈತರು ಜೋಳ, ರಾಗಿ ಸ್ಟಾಕ್ ಇಟ್ಟುಕೊಂಡು, ಇಂಥ ದುಷ್ಕಾಲದಲ್ಲಿ ಸುತ್ತಮುತ್ತಲ ಪ್ರದೇಶಕ್ಕೆ ಕಳುಹಿಸುತ್ತಿದ್ದರು. ಈಗ ರಾಭದ ಆಸೆಗೇ ಅಥವ ತಮ್ಮ ತೊಂದರೆಗಳಿಗೇ, ವಾರಾಟ ಮಾಡಿಬಿಡುತ್ತಾರೆ. ನಿಮ್ಮ ಹತ್ತಿರ ಓವರ್‌ಸ್ಟಾಕ್ ಎಷ್ಟಿದೆ, ಎಷ್ಟು ಧಾನ್ಯ ಸಂಗ್ರಹಿಸಿ ಗೋಡೌನಿನಲ್ಲಿ ಇಟ್ಟುಕೊಂಟಿದ್ದೀರ ಅನ್ನುವುದು ನಮಗೆ ಬೇಕು. ಅದು ಇಲ್ಲದೆ ಹೋದರೆ, ನೀವು ವ್ಯಾಪಾರಸ್ಥರಬಳಿಗೆ ಹೋದರೆ, ನಿಮ್ಮನ್ನು ಖಾಲಿ ಚೆಂಡು ಆಡಿಸಿದಹಾಗೆ ಆಡಿಸಿಬಿಡುತ್ತಾರೆ. ನೀವು ಅವರನ್ನು ಏನೂ ಮಾಡುವುದಕ್ಕಾಗುವುದಿಲ್ಲ. ನೀವು ಅವರ ದಯೆಗೆ ವಿನಂತಿ ಮಾಡಿಕೊಳ್ಳುತ್ತೀವೆಂದರೆ ಬಹಳ ತಪ್ಪಾಗುತ್ತದೆ. ಅವರು ಯಾವತ್ತೂ ದಯಾದಾಕ್ಷಿಣ್ಯಕ್ಕೆ ಬಗ್ಗುವವರಲ್ಲ. ಕಲ್ಕತ್ತೆಯಲ್ಲಾದ ಪ್ರಕರಣಗಳು ಇದನ್ನು ಬಹಳ ಚೆನ್ನಾಗಿ ಎತ್ತಿ ತೋರಿಸುತ್ತದೆ; ಗೋಡೌನ್‌ಗಳ ಪಕ್ಕದಲ್ಲಿಯೇ ಹೆಣಗಳ ರಾಶಿಗಳನ್ನು ನೋಡಿದ್ದಾರೆ. ಆದ್ದರಿಂದ ತಾವು ಇದನ್ನು ಸಂಪೂರ್ಣವಾಗಿ ಹತೋಟಿಗೆ ತರಬೇಕು. ರೈಸ್‌ಮಿಲ್ಲುಗಳನ್ನು ಹೇಗೆ ವಶಪಡಿಸಿಕೊಳ್ಳುತ್ತೀರ. ಅಥವ ಅವುಗಳ ಮೇಲೆ ಹತೋಟಿಯನ್ನು ಇಟ್ಟುಕೊಳ್ಳುತ್ತೀರ ಅನ್ನುವುದರಬಗ್ಗೆ ತಮ್ಮ ನೀತಿಯನ್ನು ಈ ಸಭೆಗೆ ತಿಳಿಸಬೇಕಾಗಿದೆ.

ಇವತ್ತು ಸಹಕಾರ ಸಂಸ್ಥೆಗಳ ಮೂಲಕ ಎಲ್ಲಾ ಹಳ್ಳಿಗಳಿಗೂ ಸಾಕಷ್ಟು ಆಹಾರವನ್ನು ಒದಗಿಸಬೇಕಾಗುತ್ತದೆ. ಅಗ್ಗ ದರದ ಅಂಗಡಿಗಳನ್ನು ತೆರೆಯಬೇಕು. ಹುಲ್ಲನ್ನೂ, ಮೇವನ್ನೂ ದನಗಳಿಗೆ ಸರಕಾರವೇ ಒದಗಿಸಬೇಕು, ಅಂತ ಹೇಳುತ್ತೇನೆ. ಪರಿಸ್ಥಿತಿ ಈಗ ಮಳೆ ಬಂದ ತಕ್ಷಣ ಸುಧಾರಿಸುವುದಿಲ್ಲ. ಇದು ಕಾಲಕ್ರಮೇಣ, ಪರಂಪರೆಯಾಗಿ ಬಂದಂಥ ಒಂದು ದೊಡ್ಡ ಪೆಟ್ಟು. ನಮ್ಮಲ್ಲಿ ಶೇಕಡ 99 ಜನ ಕಡುಬಡವರು; ಅವರಿಗೆ ತಿನ್ನುವುದಕ್ಕೆ ಸಿಗುತ್ತಿಲ್ಲ. ಅಂಥ ಜನರನ್ನು ಗಣನೆಗೆ ತೆಗೆದುಕೊಳ್ಳಬೇಕು. ಕೂಲಿಗಾರರಿಗೆ ನೇರವಾಗಿ ಅಕ್ಕಿ ಅಥವ ಗೋಧಿಯನ್ನು ಸರಬರಾಜು ಮಾಡಬೇಕು. ಸರಕಾರದವರು ಎಲ್ಲ ಕಡೆಗಳಲ್ಲಿಯೂ ಉದ್ಯೋಗವನ್ನು ಒದಗಿಸಬೇಕು. ಅವರು ಏನಾದರೂ ಮಾಡಿ ತಮ್ಮ ಜೀವನವನ್ನು ಕಾಪಾಡಿಕೊಂಡು ಬದುಕಿಕೊಳ್ಳುವುದಕ್ಕೆ ಸಹಾಯ ಮಾಡುವಂಥ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ಕೇವಲ ವ್ಯಾಪಾರಸ್ಥರಿಗೆ ವಿನಂತಿ ಮಾಡಿಕೊಳ್ಳುವುದರಿಂದ ಅಥವ ಅರಮನೆಸ್ಥಿನಿಂದ ಹೆಜ್ಜೆ ಇಡುವುದರಿಂದ ಏನೂ ಕೆಲಸವಾಗುವುದಿಲ್ಲವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

———

## Message from the Legislative Council.

Mr. SPEAKER.—Before I call upon the other members to speak I want to inform the House that I have received, and communication that the Bangalore University Bill, 1964, as passed by the Legislative Assembly during the current session and transmitted to the Legislative Council, has been passed by the Legislative Council without any amendment.

———

## SCARCITY CONDITIONS PREVAILING IN CERTAIN AREAS OF THE STATE.

*(Motion to consider—Debate Contd.)*

ಶ್ರೀಮತಿ ಬಸವರಾಜೇಶ್ವರಿ (ಮಾನವಿ).—ಸ್ವಾಮಿ ಅಧ್ಯಕ್ಷರೆ, ಇವತ್ತಿನ ದಿವಸ ನಮ್ಮ ಮುಂದಿರತಕ್ಕಂಥ ಸ್ಕೇರ್ಸಿಟಿ ವಿಚಾರವಾಗಿ ಎರಡು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ಹೇಳಿ ಅಪೇಕ್ಷೆ ಪಟ್ಟಿದ್ದೇನೆ.

ಕೆಲವು ಕಡೆ ಸರಿಯಾಗಿ ಮಳೆ ಬರದೇನೆ ಉಳುಮೆಯಾಗಿಲ್ಲ. ಇನ್ನು ಮಳೆ ಬಂದರೂ ಕೂಡ ಸರಿಯಾದ ಬೆಳೆ ಆಗುವ ಸಂಭವವಿಲ್ಲ. ಆದ್ದರಿಂದ ಇವತ್ತಿನ ದಿವಸ ನಮ್ಮ ದೇಶದಲ್ಲಿ ಇಂಥ ಒಂದು ಅಭಾವ ಪರಿಸ್ಥಿತಿ ಬಂದಿದೆ. ಮುಂಗಾರು ಮಳೆ ಬಹಳ ಲೇಟ್ ಆಗಿ ಬಂದಿದೆ, ಮಳೆಗಳು ಆದರೂ ಕೂಡ ಜನರಿಗೆ ಬಹಳ ತ್ರಾಸು ಆಗಿದೆ.

(ಶ್ರೀಮತಿ ಬಸವರಾಜೇಶ್ವರಿ)

ಇವತ್ತಿನ ದಿವಸ ನಮ್ಮ ಸರಕಾರದವರು ಕೇಂದ್ರ ಸರ್ಕಾರಕ್ಕೆ ಹೋಗಿ ಅಕ್ಕಿ ಮತ್ತು ಗೋಧಿಯನ್ನು ತಂದಿದ್ದಾರೆ. ಅದನ್ನು ವಿತರಣೆ ಮಾಡುವ ಬಗ್ಗೆ ಅನೇಕ ಸದಸ್ಯರು ತಮ್ಮ ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಆ ಪ್ರಕಾರವಾಗಿ ವಿತರಣೆ ಮಾಡುತ್ತಾರೆ. ಎಲ್ಲಾ ಸ್ಕೇರ್‌ಸಿಟಿ ಪ್ರದೇಶಗಳಿಗೂ ಬೇಕಾದಷ್ಟು ಅಕ್ಕಿ ಮತ್ತು ಗೋಧಿಯನ್ನು ಸಪ್ಲೈ ಮಾಡುತ್ತಾರೆಂದು ನಾನು ನಂಬಿದ್ದೇನೆ. ಏಕೆಂದರೆ ತಾವು ಹೆಚ್ಚು ಹೆಚ್ಚಾಗಿ ಗೋಧಿ, ಅಕ್ಕಿ ಸರಬರಾಜು ಮಾಡಿದ್ದೇ ಆದರೆ, ಜೋಳದ ಧಾರಣೆ ಕೆಲಮಟ್ಟಿಗೆ ಕಡಿಮೆಯಾಗಬಹುದು. ಅದರಿಂದ ಕೆಲಮಟ್ಟಿಗೆ ಒಳಗೆ ಹೋಗಿರತಕ್ಕಂಥ ಜೋಳ ಹೊರಕ್ಕೆ ತರುವ ಸಂಭವವಿದೆ. ಆದ್ದರಿಂದ ಅದನ್ನು ತಾವು ಜನಗಳಿಗೆ ತೀವ್ರ ಗತಿಯಿಂದ ಸರಬರಾಜು ಮಾಡುವುದಕ್ಕೆ ಪ್ರಾರಂಭ ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸುತ್ತಾ ಇದ್ದೇನೆ.

ಈಗ ಶಾಶ್ವತ ಪರಿಹಾರಗಳ ಬಗ್ಗೆ ಕೆಲವು ವಿಷಯಗಳನ್ನು ಸರಕಾರದ ಗಮನಕ್ಕೆ ತರಬೇಕೆಂಬ ಇಚ್ಛೆ ಇದೆ. ನಾನು ಮೊದಲಿನಿಂದಲೂ ಹೇಳುತ್ತಾ ಇದ್ದೆ: ಸ್ಟೇಟ್ ಲೆವೆಲ್ಲಿನಲ್ಲಿ ಇದಕ್ಕಾಗಿ ಒಂದು ಬಾಯಿಂ ಫಂಡ್ ಮಾಡಬೇಕೆಂದು. ಈ ಫ್ಯಾಮಿನ್ ರಿಲೀಫ್ ಫಂಡು ಒರಗಾಲಕ್ಕೆ ಉಪಯೋಗಿಸತಕ್ಕಂಥ ಹಣವಾಗಿರಬೇಕು. ಇದರ ಜೊತೆಗೆ ಫ್ಲಡ್ ರಿಲೀಫ್ ಫಂಡನ್ನೂ ಮಾಡಬೇಕು.

ಶ್ರೀ ಎಂ. ವಿ. ಕೃಷ್ಣಪ್ಪ.—ಮೂವತ್ತಮೂರು ಲಕ್ಷ ರೂಪಾಯಿ ಒಂದು ಫ್ಯಾಮಿನ್ ರಿಲೀಫ್ ಫಂಡ್ ಆಗುತ್ತಾ ಇದೆ.

ಶ್ರೀಮತಿ ಬಸವರಾಜೇಶ್ವರಿ.—ಈ ಒಡ್ಡು ವಗೈರೆಗೆ ಖರ್ಚು ಮಾಡತಕ್ಕಂಥ ಹಣವನ್ನೆಲ್ಲಾ ಕ್ರೋಢೀಕರಿಸಿ ಶಾಶ್ವತವಾದ ಪರಿಹಾರವನ್ನು ಕಂಡು ಹಿಡಿಯುವುದಕ್ಕೆ ತಾವು ಮಾರ್ಗ ಮಾಡಿ ಕೊಡಬೇಕು.

ತಾವು ಈಗ ನಲವತ್ತು ಕೋಟಿ ರೂಪಾಯಿಯ ಒಂದು ಯೋಜನೆಯನ್ನು ಇಂಡಿಯ ಸರಕಾರದ ಮುಂದೆ ಇಟ್ಟಿದ್ದೀರಾ ಎಂಬ ಅಭಿಪ್ರಾಯವನ್ನು ಕೊಟ್ಟಿದ್ದೀರ. ಈಗ ನೀರಾವರಿ ಇದ್ದ ಸ್ಥಳಗಳಲ್ಲಿ ಅಷ್ಟು ಸೌಕರ್ಯಗಳು ಬೇಕಿಲ್ಲ. ಎಲ್ಲೆಲ್ಲಿ ಮೈನರ್ ಇರಿಗೇಷನ್ ವರ್ಕ್‌ಗೆ ಬಾವಿಗಳು ಬೇಕಾಗುತ್ತವೆ, ಅಲ್ಲಿ ಹೇರಳವಾಗಿ ಹಣ ಬೇಕಾಗುತ್ತದೆ. ಬಾವಿಗಳನ್ನು ನೀರಾವರಿಗೆ ಮಾಡಿಕೊಡುವುದರಿಂದ ರೈತರಿಗೆ, ಬಹಳ ಮಟ್ಟಿಗೆ ಸಣ್ಣ ಸಣ್ಣ ಹಿಡುವಳಿದಾರರಿಗೆ, ಬಹಳ ಅನುಕೂಲವಾಗುತ್ತದೆ.

ನಮ್ಮಲ್ಲಿ ಬಂದಿರತಕ್ಕ ಕಷ್ಟ ಎಂದರೆ ಸುಮಾರು ಎರಡು ಮೂರು ಎಕರೆ ಇರತಕ್ಕ ಹಿಡುವಳಿದಾರರು ಬಾವಿಗೆ ಲೋನ್ ಕೇಳುವುದಕ್ಕೆ ಹೋದರೆ ಸಿಕ್ಕುವುದಿಲ್ಲ. ಇವತ್ತಿನವರೆಗೂ ಕಂದಾಯದ ಮೇಲೆ ಇಷ್ಟು ಪಟ್ಟು ಎಂದು ಹೇಳಿ ಲೋನ್ ಕೊಡುವುದರಿಂದ ಮೂರು ಸಾವಿರ ರೂಪಾಯಿಗಳ ಲೋನ್ ಕೊಡುತ್ತೀವೆ ಎಂದು ಏನು ಹೇಳುತ್ತೀರಿ ಅದು ಬಡ ಜನರಿಗೆ ಸಿಕ್ಕುತ್ತಾ ಇಲ್ಲ. ಅದನ್ನು ಮಾರ್ಕೆಟ್ ರೇಟ್ ನಂತೆ ಕೊಡಬೇಕೆಂದು ಈ ಸಮಯದಲ್ಲಿ ಹೇಳುತ್ತೇನೆ. ಇಲ್ಲದೇ ಇದ್ದರೆ ಸಣ್ಣ ರೈತರಿಗೆ ಈ ತರಹ ಬಾವಿಗಳನ್ನು ಮಾಡಿಕೊಂಡು ತಮ್ಮ ಅರ್ಥಿಕಾಭಿವೃದ್ಧಿಯನ್ನು ಹೆಚ್ಚು ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಮತ್ತು ಆಹಾರವನ್ನು ಕೂಡ ಹೆಚ್ಚಾಗಿ ಬೆಳೆಯುವುದಕ್ಕೆ ಸಾಧ್ಯವಿಲ್ಲ. ಹೆಚ್ಚು ಆಹಾರ ಬೆಳೆಯಬೇಕು ಎಂದು ಹೇಳುವುದು ಒಂದು ದೂರದ ಮಾತಾಗಿ ಉಳಿಯುತ್ತದೆ. ಸುಮಾರು ಎರಡು ಕೋಟಿ ರೂಪಾಯಿಗಳವರೆಗೂ ಐ.ಪಿ. ಸೆಟ್‌ಗಳನ್ನು ಖರೀದಿ ಮಾಡುವುದಕ್ಕೆ ಎಲೆಕ್ಟ್ರಿಸಿಟಿ ಬೋರ್ಡಿನವರಿಗೆ ಕೊಟ್ಟಿದ್ದೀರಿ, ಆದರೆ ಅದರ ವಿತರಣೆ ಮಾತ್ರ ಎಲ್ಲರಿಗೂ ಬಹಳ ಅನಮಾಧಾನಕರವಾದ ರೀತಿಯಲ್ಲಿ ನಡೆಯುತ್ತಾ ಇದೆ. ಪವರ್ ಇದ್ದರೂ ಕೂಡ ಅವರು ವೈರ್ ಇಲ್ಲ ಅದು ಇಲ್ಲ ಇದು ಇಲ್ಲ ಎಂದು ಹೇಳುತ್ತಾ ಇದ್ದಾರೆ, ಆದ್ದರಿಂದ ಈ ವಿಷಯದಲ್ಲಿ ನನ್ನ ಸಲಹೆ ಏನೆಂದರೆ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರುಗಳು ಬಹಳ ಮಂದಿ ಇದ್ದಾರೆ, ಅವರಿಗೆ ಅಷ್ಟಾಗಿ ಕೆಲಸವೂ ಕೂಡ ಇಲ್ಲ. ಆದ್ದರಿಂದ ಅವರನ್ನು ಈ ಚೈನಿನಲ್ಲಿ ಉಪಯೋಗಿಸಿಕೊಂಡು ಪ್ರತಿ ಹಳ್ಳಿಯಲ್ಲೂ ಅವರು ತಿರುಗಾಡಿ ಎಲ್ಲಿ ಬಾವಿಗಳನ್ನು ತೆಗೆದಿದ್ದಾರೆ ಎಲ್ಲಿ ಬಾವಿಗಳಿಗೆ ಪಂಪ್ ಸೆಟ್ಟುಗಳು ಬೇಕೆನ್ನುವುದರ ಬಗ್ಗೆ ಒಂದು ಕನ್‌ಸಾಲಡೇಟೆಡ್ ರಿಪೋರ್ಟ್ ಕೊಟ್ಟರೆ ಒಳ್ಳೆಯದಾಗುತ್ತದೆ. ಆ ರೀತಿ ಒಂದು ರಿಪೋರ್ಟನ್ನು ತರಿಸಿಕೊಂಡು ಪ್ರತಿ ಜಿಲ್ಲೆಗೂ ಪಂಪ್‌ಸೆಟ್ಟುಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಈ ಸಮಯದಲ್ಲಿ ಹೇಳುತ್ತೇನೆ. ಅದೂ ಅಲ್ಲದೆ ನಮ್ಮಲ್ಲಿ ಕೇವಲ ಎರೇ ಜಮೀನು ಬಹಳ ಇದೆ. ಅದರಲ್ಲಿ ಆಹಾರ ಹೆಚ್ಚಾಗೆ ಬೆಳೆಯಬೇಕು, ಜೋಳ ಹೆಚ್ಚಾಗಿ ಬೆಳೆಯಬೇಕೆಂದರೆ ನಮಗೆ ಬಂದಿರುವ ಕಷ್ಟ ಎಂದರೆ ಗೊಬ್ಬರಕ್ಕಿಂತ ಹೆಚ್ಚಾಗಿ ಗರಿಕೆ ಒಂದು ದೊಡ್ಡ ಪ್ರಶ್ನೆಯಾಗಿದೆ. ಎಲ್ಲಿಯವರೆಗೆ ಈ ಗರಿಕೆಯನ್ನು ಇರ್ಯಾಡಿಕೇಟ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೊ ಅದುವರೆಗೆ ಎಷ್ಟು ಬೆಳೆಯಬೇಕೆಂದು ಅಪೇಕ್ಷೆ ಪಡುತ್ತೀವೆಯೋ ಅಷ್ಟು ಬೆಳೆಯುವುದಕ್ಕೆ ಸಾಧ್ಯವಿಲ್ಲದ ಮಾತಾಗುತ್ತದೆ. ಈ ಗರಿಕೆಯನ್ನು ಪೂರ್ತಿಯಾಗಿ ನಿರ್ಮೂಲ ಮಾಡುವುದಕ್ಕೆ ಎಲ್ಲಾ ರೈತರಿಗೂ ಸಾಧ್ಯ

ವಿಲ್ಲ. ಟ್ರಾಕ್ಟರ್‌ಗಳನ್ನು ಉಪಯೋಗಿಸಬೇಕೆಂದರೆ ಎಕರೆಗೆ ನಲವತ್ತು ರೂಪಾಯಿ ಕೊಡಬೇಕಾಗುತ್ತದೆ. ಆದ್ದರಿಂದ ಇದರ ಇರ್ರಾಡಿಕೇಷನ್‌ಗೆ ಒಂದು ಪ್ರೊಗ್ರಾಂನ್ನು ಹಾಕಿಕೊಳ್ಳಬೇಕು. ಹಾಗೆ ಮಾಡಿದ್ದೇ ಆದರೆ ಅದರಿಂದ ಗೊಬ್ಬರವನ್ನು ಹಾಕುವುದಕ್ಕೂ ಕೂಡ ಬಹಳ ಅನುಕೂಲವಾಗುತ್ತದೆ. ಚೆನ್ನಾಗಿ ಬೆಳೆ ಬೆಳೆಯುವುದಕ್ಕೂ ಕೂಡ ಅನುಕೂಲವಾಗುತ್ತದೆ ಎಂದು ಈ ಸಮಯದಲ್ಲಿ ಹೇಳುತ್ತಾ ಇದ್ದೇನೆ. ಇದರ ಜೊತೆಗೆ ಎಲ್ಲಾ ಕಡೆಯಲ್ಲೂ ಕಾಂಟೂರ್ ಬಂಡಿಂಗ್‌ನ್ನು ಏನೋ ತಾವು ಹಾಕಿಸಬೇಕೆಂದು ಯೋಚನೆ ಮಾಡಿದ್ದೀರಿ ಆದರೆ ಅದರ ಪ್ರೊಸೀಜರ್ ತುಂಬಾ ಕಷ್ಟವಾಗಿದೆ. ಅದನ್ನು ಮಾಡತಕ್ಕ ಸಿಬ್ಬಂದಿ ಅಂತೂ ಇಲ್ಲವೇ ಇಲ್ಲ. ಇಡೀ ತಾಲ್ಲೂಕಿಗೆ ಒಬ್ಬರು ಇಬ್ಬರು ಆಫೀಸರು ಇದ್ದಾರೆ ಹೀಗಿರುವಾಗ ಕೊಟ್ಟಂತಹ ದುಡ್ಡು ರ್ಯಾಪ್ಸ್ ಆಗುತ್ತಾ ಇದೆ. ಈ ಒದ್ದುಗಳು ನಮ್ಮಲ್ಲಿ ಅಂತೂ ಬೇಕೇ ಬೇಕು. ಕೆಂಪು ಜಮೀನಿಗೆ ಹಾಕುತ್ತಾ ಇದ್ದಾರೆ ಕರೀ ಜಮೀನಿಗೆ ಬೇಡ ಎನ್ನುತ್ತಾರೆ, ಆ ರೀತಿ ಅಲ್ಲ ಅದನ್ನು ಎಲ್ಲಾ ಜಮೀನಿಗೂ ಹಾಕಿಸಲೇಬೇಕು ಹದಿನೈದು ಇಂಚು ಮಳೆ ಇರತಕ್ಕ ಜಮೀನಿಗೆ ಈ ಬಂಡಿಂಗನ್ನು ಹಾಕಿಸುವುದರಿಂದ ಹೆಚ್ಚು ಆಹಾರ ಬೆಳೆಯುವುದಕ್ಕೂ ಸಹ ಅನುಕೂಲವಾಗುತ್ತದೆ ಮತ್ತು ಚೆನ್ನಾಗಿ ಬೆಳೆ ಬೆಳೆಯಬಹುದು. ಆದ್ದರಿಂದ ಕಾಂಟೂರ್ ಬಂಡಿಂಗ್‌ನ್ನು ಎಲ್ಲಾ ಕಡೆಗೂ ಎಕ್ಸ್‌ಟೆಂಡ್ ಮಾಡಬೇಕು. ಇದರ ಒಂದು ಪ್ರೊಸೀಜರ್ ಏನಿದೆ ಇದು ಬಹಳ ತ್ರಾಸದಾಯಕವಾಗಿದೆ ಅದರಿಂದ ಬಹಳ ವಿಳಂಬವಾಗುತ್ತಾ ಇದೆ,ಆದ್ದರಿಂದ ಹೆಚ್ಚು ಸಿಬ್ಬಂದಿಯನ್ನು ಕೊಟ್ಟು ಈ ಎಲ್ಲಾ ಕೆಲಸಗಳನ್ನೂ ಮಾಡಬೇಕು. ಮತ್ತು ಸ್ಕೇರ್‌ಸಿಟಿ ಏರಿಯಾದಲ್ಲಿ ಕಾಂಟೂರ್ ಬಂಡಿಂಗ್ ಪ್ರೊಗ್ರಾಂನ್ನು ಇಟ್ಟುಕೊಳ್ಳಬೇಕೆಂದು ಈ ಸಮಯದಲ್ಲಿ ಹೇಳುತ್ತೇನೆ. ಕೇವಲ ಇನ್-ಕಂಪ್ಲೀಟೆಡ್ ರೋಡ್ಸ್ ತೆಗೆದುಕೊಳ್ಳುವುದು ಮಾತ್ರವಲ್ಲದೆ ಅದರ ಜೊತೆಗೆ ಎಲ್ಲೆಲ್ಲಿ ಸರ್ವೆ ಆಗಿದೆ. ಎಲ್ಲೆಲ್ಲಿ ಕಾಂಟೂರ್ ಬಂಡಿಂಗ್ ಮಾಡಬೇಕು ಎಂಬುದು ನಿರ್ಧಾರವಾಗಿದೆ ಅಂತಹ ಕಡೆಗಳಲ್ಲಿ ಇವೆರಡು ಕೆಲಸಗಳನ್ನೂ ಒಟ್ಟಿಗೆ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.ಏಕೆಂದರೆ ಅಲ್ಲರತಕ್ಕ ಜನರಿಗೆ ಕೆಲಸಗಳನ್ನು ಕೊಡುವುದಕ್ಕೂ ಸಹ ಅನುಕೂಲವಾಗುತ್ತದೆ. ಮತ್ತು ರೈತರು ಹೆಚ್ಚು ಆಹಾರ ಬೆಳೆಯಬೇಕೆಂದು ಎಲ್ಲರೂ ಹೇಳುತ್ತಾ ಇದ್ದಾರೆ. ಈ ದಿವಸ ನೀರಾವರಿ ಯೋಜನೆಗಳನ್ನು ಹೆಚ್ಚು ಹೆಚ್ಚಾಗಿ ಮಾಡುತ್ತಾ ಇದ್ದಾರೆ, ನೀರಾವರಿ ಬಾವಿಗಳನ್ನು ತೆಗೆಸುತ್ತಾ ಇದ್ದಾರೆ. ಆದರೆ ಇವತ್ತು ರೈತರಿಗೆ ಸಿಕ್ಕುತ್ತಾ ಇರತಕ್ಕ ಗೊಬ್ಬರ ಮಾತ್ರ ಸರಿಯಾಗಿ ಸಿಕ್ಕುತ್ತಾ ಇಲ್ಲ. ಕೆಮಿಕಲ್ ಫರ್ಟಿಲೈಸರ್ಸ್ ಧಾರಣ್ ಬಹಳ ಹೆಚ್ಚಾಗಿದೆ. ಪ್ರತಿಯೊಬ್ಬ ರೈತನೂ ಅದನ್ನು ಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇದನ್ನು ನಾನು ಪ್ರತಿ ಸಲವೂ ಹೇಳುತ್ತಾ ಇದ್ದೇನೆ. ಸೂಪರ್ ಫಾಸ್‌ಫೇಟ್‌ಗೆ ಗವರ್ನಮೆಂಟ್ ಇಂಡಿಯಾದವರು ಸಬ್ಸಿಡಿ ಕೊಡುತ್ತಾ ಇದ್ದಾರೆ, ತಾವು ಇಷ್ಟತ್ತೆದು ಪರ್ಸೆಂಟ್ ಕೊಟ್ಟು ಅದನ್ನು ಸಪ್ಲೈ ಮಾಡಿರಿ ಎಂದರೆ ಅದನ್ನು ಮಾಡಿಲ್ಲ. ಆದ್ದರಿಂದ ದಯವಿಟ್ಟು ಸಬ್ಸಿಡೈಸ್ಡ್ ರೇಟ್‌ನಲ್ಲಿ ಸೂಪರ್ ಫಾಸ್‌ಫೇಟ್‌ನ್ನು ಮತ್ತು ಕೆಮಿಕಲ್ ಮೆನ್ಯೂರ್‌ನ್ನು ರೈತರಿಗೆ ಒದಗಿಸುವ ಏರ್ಪಾಡನ್ನು ಮಾಡಬೇಕೆಂದು. ಶ್ರೀಮಾನ್ ಸುಬ್ರಹ್ಮಣ್ಯಂ ಅವರು ಆರನೇ ತಾರೀಖು ಬರುತ್ತಾರೆ ಇದನ್ನೆಲ್ಲಾ ಅವರ ಮುಂದೆ ಇಡಬೇಕೆಂದು ಈ ಸಮಯದಲ್ಲಿ ತಿಳಿಸುತ್ತೇನೆ.

ಡೀಸಲ್ ರೇಟ್ ಬಹಳ ಜಾಸ್ತಿಯಾಗುತ್ತಾ ಇದೆ. ಡೀಸಲ್ ಪಂಪ್ ಸೆಟ್ಸ್ ಮತ್ತು ಎಲೆಕ್ಟ್ರಿಕ್ ಪಂಪ್ ಸೆಟ್ಸ್ ಎರಡನ್ನೂ ಸಹ ಕೊಡುತ್ತಾ ಇದ್ದಾರೆ. ಈಗಿನ ರೇಟ್‌ನಂತೆ ಡೀಸಲ್ ಸೆಟ್ಸ್‌ನ್ನು ಉಪಯೋಗಿಸಬೇಕೆಂದರೆ ಬಹಳ ಕಷ್ಟವಾಗುತ್ತದೆ, ಅದನ್ನೂ ಕೂಡ ರಿಯಾಯಿತಿ ದರದಲ್ಲಿ ಒದಗಿಸುವಂತೆ ಕೇಂದ್ರ ಸರ್ಕಾರದವರಿಗೆ ತಿಳಿಸಬೇಕೆಂದು ಈ ಸಮಯದಲ್ಲಿ ಹೇಳುತ್ತೇನೆ. ನಮ್ಮ ಕಾನ್‌ಸ್ಟಿಟ್ಯೂಯನ್ಸಿಯಲ್ಲಿ ಮುಕ್ಕಾಲು ಭಾಗ ತುಂಗ ಭದ್ರಾನದಿ ನೀರು ಬರುತ್ತಾ ಇದೆ. ಮಾನ್ಯ ಸದಸ್ಯರಾದ ಶ್ರೀಮಾನ್ ಗೋಪಾಲ ಗೌಡರು ನೀರು ಹರಿಯುತ್ತಾ ಇದೆ, ಯಾರೂ ಉಪಯೋಗಿಸಿಕೊಂಡಿಲ್ಲ, ಅಣೆಕಟ್ಟುಗಳನ್ನು ಕಟ್ಟಿ ಇಷ್ಟೆಲ್ಲಾ ದುಡ್ಡು ದುರುಪಯೋಗವಾಗಿದೆ ಎಂದು ಹೇಳುತ್ತಾ ಇದ್ದರು. ಮಾನ್ಯ ಸದಸ್ಯರಿಗೆ ನಾನು ಈ ಸಂದರ್ಭದಲ್ಲಿ ಹೇಳಬೇಕೆಂದರೆ ನಮ್ಮ ಕಾನ್‌ಸ್ಟಿಟ್ಯೂಯನ್ಸಿಯಲ್ಲಿ ಜನರು ನೀರನ್ನು ಬಹಳ ಚೆನ್ನಾಗಿ ಉಪಯೋಗಿಸಿಕೊಂಡಿದ್ದಾರೆ.ಅಲ್ಲಿ ತುಂಬಾ ಚೆನ್ನಾಗಿ ಬೆಳೆ ಬೆಳೆದಿದ್ದಾರೆ ಅವರಿಗೆ ಯಾವ ರೀತಿಯಲ್ಲೂ ಕೂಡ ನೀರಿನ ಅಭಾವ ಇಲ್ಲ,ಆದರೆ ಸಿಂಧನೂರಿನಲ್ಲಿ ಮಾತ್ರ.

ಶ್ರೀ ಎಸ್. ಗೋಪಾಲಗೌಡ.—ನಾನು ರಾಯಚೂರು ಭಾಗದಲ್ಲಿ ಪ್ರವಾಸ ಮಾಡಿ ನೋಡಿದ್ದೇನೆ. ಅಲ್ಲಿ ಯಾವ ರೀತಿ ನೀರಿನ ಉಪಯೋಗ ವಾಗುತ್ತಾ ಇದೆ ಎಂಬುದು ನನಗೆ ಗೊತ್ತಿದೆ. ಐದು ಲಕ್ಷ ಎಕರೆ ತರೀ ನಲ್ಲಿ ಎರಡೂವರೆ ಲಕ್ಷ ಎಕರೆ ಕೂಡ ಇನ್ನೂ ಆಗಿಲ್ಲ.

ಶ್ರೀಮತಿ ಬನಶಂಕರಾಜೇಶ್ವರಿ.—ನಾನು ನಮ್ಮ ಕ್ಷೇತ್ರದ ವಿಚಾರವನ್ನು ಹೇಳುತ್ತಾ ಇದ್ದೇನೆ. ಸಿಂಧನೂರಿನ ವಿಷಯ ಬೇರೆ. ಅದು ದೇವರ ವಿಕೋಪಕ್ಕೆ ಈಡಾಗಿದೆ. ಅಲ್ಲಿ ಸ್ವಲ್ಪ ನಿಧಾನವಾಗುತ್ತಾ ಇದೆ. ಆದರೂ ಕೂಡ ಇನ್ನು ಸ್ವಲ್ಪ ದಿವಸದಲ್ಲೇ ಆ ಏರಿಯಾ ಡೆವಲಪ್ ಆಗತಕ್ಕ ಸಂಭವ ಇದೆ, ಮಾನವಿ ಮತ್ತು ಗಂಗಾವತಿ ಪ್ರದೇಶಗಳನ್ನು ಮಾನ್ಯ ಸದಸ್ಯರು ನೋಡಿದ್ದಿದ್ದರೆ ಈ ತರಹ ಟೀಕೆ ಮಾಡುವುದಕ್ಕೆ ಅವಕಾಶವಿರಲಿಲ್ಲ. ಆ ಪ್ರದೇಶಗಳು ಬಹಳ ಚೆನ್ನಾಗಿ ಡೆವಲಪ್ ಆಗುತ್ತಾ ಇವೆ.

(ಶ್ರೀಮತಿ ಬಸವರಾಜೇಶ್ವರಿ)

ಇನ್ನು ಕಂದಾಯದ ವಸೂಲಿ ಬಗ್ಗೆ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಇಂದಿನ ಒಂದು ಪರಿಸ್ಥಿತಿಯಲ್ಲಿ ತಕಾವಿ ಸಾಲವಾಗಲಿ ಅಥವಾ ಇನ್ನಿತರ ಯಾವುದೇ ಸಾಲಗಳಾಗಲಿ ಅಷ್ಟು ತೀವ್ರತೆಯಿಂದ ವಸೂಲು ಮಾಡಬಾರದು ಎಂದು ಈ ಸಮಯದಲ್ಲಿ ಹೇಳುತ್ತೇನೆ. ಇಷ್ಟು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವೀರಭದ್ರಪ್ಪ ಈರಪ್ಪ (ಯಲಬುರ್ಗಿ).—ಮಾನ್ಯ ಸಭಾಪತಿಗಳೇ, ನಮ್ಮ ರಾಜ್ಯದಲ್ಲಿ ಅಭಾವ ಪರಿಸ್ಥಿತಿ ಉಂಟಾಗಿದ್ದು ಸದ್ಯದಲ್ಲಂತೂ ಅತಿ ಗಂಭೀರ ಪರಿಸ್ಥಿತಿ ಉಂಟಾಗಿದೆ. ಆದಕಾರಣ ಈಗ ಈ ಮಹಾ ಸಭೆಯಲ್ಲಿ ಈ ವಿಷಯವನ್ನು ಚರ್ಚೆ ಮಾಡಬೇಕಾಗಿದೆ. ಮಹಾಸ್ವಾಮಿ, ನಾನು ನಮ್ಮ ಜಿಲ್ಲೆಯ ಪರಿಸ್ಥಿತಿ, ನಮ್ಮ ತಾಲ್ಲೂಕಿನ ಪರಿಸ್ಥಿತಿಯನ್ನು ಮಾತ್ರ ಈ ಮಾನ್ಯ ಸಭೆಯ ಮುಖಾಂತರ ಸರ್ಕಾರದವರ ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನ ಮಾಡುತ್ತೇನೆ. ರಾಯಚೂರು ಜಿಲ್ಲೆಯಲ್ಲಿ ಕಳೆದ ಹತ್ತು ವರ್ಷಗಳಲ್ಲಿನ ಒಂದು ಪರಿಸ್ಥಿತಿಯನ್ನು ನೋಡಿದರೆ 6 ವರ್ಷ ಬರಗಾಲ ಪರಿಸ್ಥಿತಿ ಉಂಟಾಗಿದೆ. ಸರ್ಕಾರದವರು 5—6 ವರ್ಷಗಳಿಂದ ಅಲ್ಲಿನ ಜನರಿಗೆ ಕಂದಾಯ ವಗೈರೆಗಳನ್ನು ವಸೂಲು ಮಾಡುವುದನ್ನು ಬಿಟ್ಟಿದ್ದಾರೆ. ಅಲ್ಲಿ ಬರಗಾಲ ಪರಿಸ್ಥಿತಿ ಇದೆ ಎನ್ನುವುದಕ್ಕೆ ಇದೆ. ಒಂದು ಸ್ಪಷ್ಟ ನಿದರ್ಶನ ಎಂದು ಹೇಳಬಹುದು. ಹೋದ ವರ್ಷ ಅಂತೂ ಅತಿ ಭೀಕರ ಪರಿಸ್ಥಿತಿ ಉಂಟಾಗಿ ಯಲಬುರ್ಗ, ಕೊಪ್ಪಳ, ಕುಷ್ಟಗಿ ತಾಲ್ಲೂಕುಗಳಲ್ಲಿ ಸರ್ಕಾರದವರು ಕಂದಾಯವನ್ನು ಮಾಫಿ ಮಾಡಿದರು, ರೈತರಿಗೆ ಮತ್ತು ಕೂಲಿಗಾರರಿಗೆ ಜೀವನೋಪಾಯಕ್ಕೆ ಬಹಳ ತೊಂದರೆಯಾಗಿ ಅನೇಕ ಗ್ರಾಮಗಳು ಬೀಳು ಬಿದ್ದಿವೆ. ನಮ್ಮ ತಾಲ್ಲೂಕಿನಲ್ಲಿ ಮತ್ತು ಕುಷ್ಟಗಿ ತಾಲ್ಲೂಕಿನಲ್ಲಿ ಈಗೇನೋ ಮಳೆಯಾಗಿದೆ, ಆದರೂ ಕೂಡ ರೈತರಿಗೆ ತ್ರನೆ ಮಾಡುವುದಕ್ಕೆ ಬೀಜ ಇಲ್ಲ. ಅವರಿಗೆ ಬೇರೆ ಯಾರ ಹತ್ತಿರವೂ ಕೂಡ ಸಾಲ ಸಿಕ್ಕುವುದಿಲ್ಲ. ಈ ಹಿಂದೆ ಅವರು ಸಾಲ ಮಾಡಿರುವುದರಿಂದ ಅವರಿಗೆ ಸೊಸೈಟಿಗಳ ಮುಖಾಂತರವೂ ಕೂಡ ಸಾಲ ಸಿಕ್ಕುವ ಹಾಗೆ ಇಲ್ಲ. ತಕಾವಿ ಸಾಲ ಕೊಡಲಿಕ್ಕೆ ಹತ್ತಿದ್ದಾರೆ, ಕೇವಲ ಒಬ್ಬೊಬ್ಬ ರೈತನಿಗೆ 25 ರೂಪಾಯಿ ಸಾಲ ಕೊಟ್ಟಿದ್ದಾರೆ. ಅದರಲ್ಲಿ 5—6 ರೂಪಾಯಿ ಲಂಚಕ್ಕೆ ಹೋಗುತ್ತದೆ 4—5 ರೂಪಾಯಿ ಇತರೇ ಖರ್ಚಿಗಾಗಿ ಹೋಗುತ್ತದೆ, ಹೀಗಾಗಿ ಅವರ ಕೈಗೆ ಸಿಕ್ಕುವ ಹಣ ಬಹಳ ಕಡಿಮೆ. ಇಷ್ಟರಲ್ಲೇ ಮಳೆ ಬದ್ದರೂ ಕೂಡ ಬೀಜ ಬಿತ್ತುವುದಕ್ಕೆ ಅವಕಾಶವಿಲ್ಲದಂತಾಗಿದೆ, ರೈತರು ಬರಗಾಲವನ್ನು ಎದುರಿಸಬೇಕಾಗಿ ಬಂದಿರುವ ಪ್ರಸಂಗ ಬಂದಿದೆ. ಈ ಮೂರು ತಾಲ್ಲೂಕುಗಳಲ್ಲಿ ಇನ್ನೂ ಕೂಡ ಮಳೆ ಬಂದಿಲ್ಲ, ಹೋದ ಏಪ್ರಿಲ್‌ನಲ್ಲಿ ಮಳೆ ಆಗಬೇಕಾಗಿತ್ತು, ಅದು ಆಗದೇ ಇದ್ದುದರಿಂದ ಈಗ ಒಂದೆರಡು ಮಳೆಗಳಾದರೂ ಕೂಡ ರೈತರು ಬೆಳೆ ಮಾಡುವುದಕ್ಕೆ ಅವಕಾಶವಿಲ್ಲದಂತಾಗಿದೆ, ಹೋದ ವರ್ಷವೂ ಕೂಡ ಇದೇ ರೀತಿ ಆಯಿತು. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರದವರು ಯಾವ ರೀತಿ ಇದರ ನಿವಾರಣೋಪಾಯ ಮಾಡಬೇಕೆನ್ನುವುದರ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕೆಂದು ಇದ್ದೇನೆ. ತುಂಗಭದ್ರಾ ವಿಷಯ ಮಾನ್ಯ ಸಭೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ, ತುಂಗಭದ್ರಾ ನದಿಗೆ ಅಣೆಕಟ್ಟು ಕಟ್ಟಿರುವ ಭಾಗದಲ್ಲಿ 7 ಲಕ್ಷ 80 ಸಾವಿರ ಎಕರೆ ನೀರಾವರಿಯಾಗಬೇಕೆಂದು ಇದ್ದರೂ ಕೂಡ ಕೇವಲ ಎರಡೂವರೆ ಲಕ್ಷಕ್ಕಿಂತಲೂ ಹೆಚ್ಚಿಗೆ ನೀರಾವರಿಯಾಗಿಲ್ಲ. ಈ ಬಗ್ಗೆ ಸರ್ಕಾರದ ಅಂಕಿಸಂಖ್ಯೆ ಇದೆ, ಮಾನ್ಯ ಮಂತ್ರಿಗಳು ಪ್ರವಾಸ ಬಂದಾಗ ವಿಚಾರ ಪ್ರಸ್ತಾಪಮಾಡಿದ್ದಾರೆ, ನಾರೆ ಇದ್ದರೂ ರೈತರಿಗೆ ಸರಿಯಾಗಿ ನೀರು ಸರಬರಾಯಾಗುತ್ತಿಲ್ಲ, ನಾಲೆಗಳಲ್ಲಿ ಹುಲ್ಲು ಬೆಳೆದು ಮಣ್ಣು ತುಂಬಿ ಮುಚ್ಚಿಹೋಗಿ ನೀರೇ ಸರಿಯಾಗಿ ಬರುವುದಿಲ್ಲ. ಗಂಗಾವತಿ ಮತ್ತು ಕೊಪ್ಪರ್ ತಾಲ್ಲೂಕು ರೈತರು ಈ ಬಗ್ಗೆ ಮನವಿಮಾಡಿದ್ದಾರೆ. ಸಿಂಧನೂರು ತಾಲ್ಲೂಕಿನಲ್ಲೂ ಕಾಲುವೆ ಇದೆ, ಆದರೆ ನೀರು ಬರಲು ಸರಿಯಾದ ವ್ಯವಸ್ಥೆ ಮಾಡಿಲ್ಲ. ಕೆಲವು ಕಡೆ ಬೇಕಿಲ್ಲದವರಿಗೆ ನೀರು ಬೇಕಾದಷ್ಟು ದೊರೆತು ಅವಶ್ಯಕತೆ ಇರುವವರಿಗೆ ನೀರೇ ದೊರೆಯುತ್ತಿಲ್ಲ, ಬಡವರಿಗೆ ಸಿಕ್ಕುವುದಿಲ್ಲ, ಬೇಕಾದವರಿಗೆ ಸಿಕ್ಕುತ್ತದೆ; ಇದು ಸರಿಯಲ್ಲ. ಇಂಥ ಪರಿಸ್ಥಿತಿ ಇರುವುದರಿಂದ ಅಣೆಕಟ್ಟು ಕಟ್ಟಿದ್ದೇವೆಂದು ಸರ್ಕಾರ ಹೇಳಿದರೂ ಹೆಸರಿಗೆ ಮಾತ್ರ ಕಟ್ಟಿರುವರೇ ಹೊರತು ಅದರಿಂದ ರೈತರಿಗೆ ಸಾಕಷ್ಟು ಉಪಯೋಗವಾಗಿಲ್ಲ. ಸಣ್ಣ ನೀರಾವರಿ ಕೆಲಸಗಳನ್ನು ಮಾಡುತ್ತಿರುವುದಾಗಿಯೂ, ಬಾವಿಗಳಿಗಾಗಿ ರೈತರಿಗೆ ಸಾಲ ಕೊಡುತ್ತಿರುವುದಾಗಿಯೂ ಹೇಳುತ್ತಿದ್ದಾರೆ. ಆದರೆ ಯಾವ ರೈತನಿಗೆ ಉತ್ತಿ ಬಿತ್ತಿ ಬೆಳೆಯಲು ಅವಕಾಶವಿದೆ, ಯಾರಿಗೆ ಸಾಲದ ಅಗತ್ಯವಿದೆ ಅವರಿಗೆ ಸಾಲ ಸಿಕ್ಕಿಲ್ಲ, ಕೇವಲ ಆಡಳಿತ ಪಕ್ಷದವರಿಗೆ ಅಥವಾ ಸರ್ಕಾರದ ಹಿಂಬಾಲಕರಿಗೆ ತಾಲ್ಲೂಕು ಬೋರ್ಡು, ಮುಂತಾದುವುಗಳಿಗೆ ಸಾಲ ಕೊಡುತ್ತಿದ್ದಾರೆ. ಇದರಿಂದ ರೈತರಿಗೆ ಎಷ್ಟು ಬಾವಿಗಳ ಅವಶ್ಯಕತೆ ಇದೆಯೋ ಅದನ್ನು ಪೂರೈಸಿ ವ್ಯವಸಾಯ ಮಾಡಲು ಅವಕಾಶ ದೊರೆತಿಲ್ಲ. ನಮ್ಮ ತಾಲ್ಲೂಕು ಬೋರ್ಡಿಗೆ 300 ಅರ್ಜಿ ಬಂದಿವೆ. ಆದರೆ ಅಗತ್ಯವಿರುವವರಿಗೆ ಸಾಲ ದೊರೆಯುತ್ತಿಲ್ಲ. ಎಷ್ಟೋ ಪ್ರಭಾವ ಶಾಲಿಗಳು ಸಾಲ ತೆಗೆದುಕೊಂಡು ಮಣ್ಣು ಕೂಡ ತೆಗೆಯದೆ ಇದ್ದರೂ ಪುನಃ ಅವರಿಗೆ ಸಾಲ ಸಿಕ್ಕುತ್ತಿದೆ. ಹೀಗಾಗದಂತೆ ನೋಡಿಕೊಳ್ಳಬೇಕು.

ಇನ್ನೊಂದು ವಿಷಯ. ಸರ್ಕಾರ ತುಂಗಭದ್ರ ಮೇಲು ಭಾಗದಲ್ಲೂ ಒಂದು ಅಣೆಕಟ್ಟು ಕಟ್ಟ ಬೇಕು. ಹಾಗೆ ಮಾಡಿ ಬಳ್ಳಾರಿ, ಮತ್ತು ರಾಯಚೂರು ಜಿಲ್ಲೆಗಳ ಕೊಪ್ಪಳ, ಯಲಬುರ್ಗಿ, ಕುಷ್ಟಗಿ ತಾಲ್ಲೂಕುಗಳಲ್ಲಿ ನೀರಾವರಿಗೆ ಅವಕಾಶವಾಗುವಂತೆ ಮಾಡಬೇಕು. ಅದೆಲ್ಲದೆ ಪ್ರತಿಯೊಂದು ತಾಲ್ಲೂಕಿನಲ್ಲೂ ಅನೇಕ ಹಳ್ಳಿಗಳಿವೆ. ಎಲ್ಲಿ ಕೆರೆ ಕಟ್ಟಬೇಕು ಎಂದು ಸರ್ವೆಮಾಡಲು ಪ್ರಯತ್ನ ನಡೆದಿದೆ. ಆದಷ್ಟು ತೀವ್ರವಾಗಿ ಮಧ್ಯಮ ನೀರಾವರಿ ಕಾರ್ಯಗಳನ್ನು ಮಾಡಬೇಕು. ಬಾವಿಗಳಿಗೆ ಸಾಲ ಕೊಡುವಾಗ ಕೆಲವು ರೈತರು ಬಾವಿ ತೆಗೆದಿದ್ದಾರೆ, ಅವರಿಗೆ 3 ಸಾವಿರ ರೂಪಾಯಿಗಳನ್ನು ಕೊಟ್ಟಾಗಿದೆ, ನಮ್ಮಲ್ಲಿ ಕಲ್ಲು ಸಿಕ್ಕುವುದರಿಂದ ನೀರು ಬೀಳಬೇಕಾದರೆ ಬಹಳ ಆಳವಾಗಿ ಬಾವಿ ತೆಗೆಯಬೇಕಾಗಿರುವುದರಿಂದ ಕೊಟ್ಟಿರುವ ಹಣದಲ್ಲಿ ಬಾವಿ ಪೂರ್ತಿ ತೆಗೆದು ನೀರನ್ನು ಉಪಯೋಗ ಮಾಡಲು ಸಾಧ್ಯವಾಗಿಲ್ಲ; ಇದನ್ನು ಗಮನಿಸಿ ಅಗತ್ಯವಿರುವ ಕಡೆ ಬೇಡಿಕೆ ಇರುವ ಕಡೆ ಹೆಚ್ಚು ಹಣ ಕೊಟ್ಟು ನೀರಾವರಿ ವ್ಯವಸಾಯಮಾಡಲು ಅನುಕೂಲ ಕಲ್ಪಿಸಿಕೊಡಬೇಕು. ಅಲ್ಲದೆ ನಮ್ಮ ಜಿಲ್ಲೆಯಲ್ಲಿ ಪಂಪುಸೆಟ್ಟುಗಳಿಗೆ ಸುಮಾರು ಒಂದು ಸಾವಿರ ಅರ್ಜಿಗಳು ಬಂದಿವೆ. ಆದರೆ ಕೇವಲ 10 ಐ. ಪಿ. ಸೆಟ್ಟುಗಳನ್ನು ಕೊಟ್ಟಿದ್ದಾರೆ. ಇನ್ನೂ ಅಧಿಕ ಸಂಖ್ಯೆಯ ಜನರಿಗೆ ಕೊಟ್ಟಿಲ್ಲ. ನೂರು ಜನರಿಗೆ ಡೀಸಲ್ ಆಯಿಲ್ ಎಂಜಿನ್ ಕೊಟ್ಟಿದ್ದಾರೆ; ಇನ್ನೂ 1,200 ಮಂದಿಗೆ ಕೊಟ್ಟಿಲ್ಲ. ಕೇಳಿದರೆ ಕಂಬ ಹಾಕುತ್ತಿದ್ದೇವೆ, ಲೈನು ಹಾಕುತ್ತಿದ್ದೇವೆ, ಆದಾದ ನಂತರ ಕೊಡುತ್ತೇವೆ ಎಂದು ಹೇಳುತ್ತಾರೆ. ಆದರೆ ಅದೆಲ್ಲಾ ಆಗಿ ಕೊಡುವ ಹೊತ್ತಿಗೆ ರೈತರ ಗತಿಯೇನಾಗುತ್ತದೆಯೆಂಬುದನ್ನು ಯಾರೂ ಗಮನಿಸಿಲ್ಲ. ನಮ್ಮ ರಾಷ್ಟ್ರದ ಬೆನ್ನೆಲುಬಿನಂತೆ ರೈತ ಇದ್ದಾನೆ ಎಂದು ಬಾಯಲ್ಲಿ ಮಾತ್ರ ಹೇಳುತ್ತಿದ್ದಾರೆ. ಆದರೆ ಸೇಕಡ 80 ಮಂದಿ ರೈತರಿದ್ದರೂ ಹೊರದೇಶದಿಂದ ಕಾಳನ್ನು ತರಿಸುತ್ತಿರುವುದು ದುರ್ದೈವದ ಸಂಗತಿ. ಆದುದರಿಂದ ರೈತರ ವಿಚಾರದಲ್ಲಿ ಹೆಚ್ಚು ಗಮನಕೊಟ್ಟು ಅವರು ಸಾಕಷ್ಟು ಬೆಳೆಯಲು ಅವಕಾಶಮಾಡಬೇಕು. ಅವರಿಗೆ ಬೇಕಾದ ಬೀಜ, ಗೊಬ್ಬರ, ಎಂಜಿನ್, ಬಾವಿಗಳ ಸಾಲ ಹೆಚ್ಚುಹೆಚ್ಚಾಗಿ ಕೊಟ್ಟು ಅನುಕೂಲ ಮಾಡಿಕೊಡಬೇಕು.

ಇನ್ನೊಂದು ವಿಷಯ. ಈಗ ಧಾರಣೆ ಬಹಳವಾಗಿ ಏರಿದೆ. ಅದಕ್ಕೆ ಸರ್ಕಾರದವರೇ ಮುಖ್ಯ ಕಾರಣರು. ಅವರು ಜೀವನಾವಶ್ಯಕವಾದ ವಸ್ತುಗಳ ಮೇಲೆ ಹೆಚ್ಚಿಗೆ ಕಂದಾಯ ಹಾಕಿ ಬೆಲೆ ಏರುವುದಕ್ಕೆ ಅವಕಾಶಮಾಡಿದ್ದಾರೆ. ಕೇಂದ್ರ ಸರ್ಕಾರ ಮತ್ತು ರಾಜ್ಯಸರ್ಕಾರ ಎರಡೂ ಅನೇಕ ವಿಧವಾದ ತೆರಿಗೆಗಳನ್ನು ಹಾಕಿ ಬೆಲೆ ಏರಲು ಅವಕಾಶಕೊಟ್ಟಿದ್ದಾರೆ. ಅವರು ಕಡಮೆ ತೆರಿಗೆ ಹಾಕಿ ಬೆಲೆ ಇಳಿಯುವಂತೆ ಮಾಡಬೇಕೆಂದು ಸೂಚಿಸುತ್ತೇನೆ.

ಇನ್ನೊಂದು ಮಾತು. ಈಗ ನಮ್ಮ ಸರ್ಕಾರದವರು ಕೇಂದ್ರ ಸರ್ಕಾರದಿಂದ ಅಕ್ಕಿ ತರಿಸುವುದಾಗಿ ಹೇಳುತ್ತಿದ್ದಾರೆ. ಆದರೆ ನಾನೊಂದು ಪ್ರಶ್ನೆ ಹಾಕಬೇಕಾಗಿದೆ. ನಮ್ಮ ತುಂಗಭದ್ರ ಪ್ರದೇಶದಲ್ಲಿ ಗಂಗಾವತಿ ಮತ್ತು ಕೊಪ್ಪಳ ತಾಲ್ಲೂಕುಗಳಲ್ಲಿ ಬೆಳೆದ 10 ಸಾವಿರ ಚೀಲ ನೆಲ್ಲು ಆಂಧ್ರಕ್ಕೆ ಹೋಗಿದೆ. ಅದು ಹೇಗೆ ಹೋಯಿತು ಎಂಬುದನ್ನು ಪರಿಶೀಲನಬೇಕಾಗಿದೆ. ಏಕೆ ಹೋಯಿತು, ಯಾರು ಅದಕ್ಕೆ ಅವಕಾಶ ಕೊಟ್ಟರು ಎಂಬುದನ್ನು ವಿಚಾರಮಾಡಿ ಸೂಕ್ತ ಕ್ರಮ ಕೈಕೊಳ್ಳಬೇಕು. ಇಷ್ಟನ್ನು ಹೇಳಿ ದಯಮಾಡಿ ಎಲ್ಲ ಸಲಹೆಗಳನ್ನೂ ಗಮನಿಸಿ ತೀವ್ರ ಪರಿಹಾರ ಕ್ರಮವನ್ನು ಕೈಕೊಳ್ಳ ಬೇಕೆಂದು ಪ್ರಾರ್ಥನೆಮಾಡುತ್ತೇನೆ.

†ಶ್ರೀ ಜಿ. ದುಗ್ಗಪ್ಪ (ಹೊಳಲ್ಕೆರೆ).—ಮಾನ್ಯ ಸಭಾಧ್ಯಕ್ಷರೆ, ಈಗ ಸಭೆಯ ಮುಂದಿರುವ ಮತ್ತು ನಮ್ಮ ಕಂದಾಯ ಮಂತ್ರಿಗಳು ಮಂಡಿಸಿರುವ ಸೂಚನೆಯ ಮೇಲೆ ಕೆಲವೊಂದು ಮಾತುಗಳನ್ನು ಹೇಳಬಯಸುತ್ತೇನೆ. ಈ ರಾಜ್ಯದ ಕೆಲವು ಪ್ರದೇಶಗಳಲ್ಲಿ ಆಹಾರದ ಅಭಾವ ತಲೆದೋರಿದೆ. ನಾನು ಅರಿಸಿ ಬಂದಿರುವ ಪ್ರದೇಶದಲ್ಲೂ ಅಭಾವ ಪರಿಸ್ಥಿತಿ ಈಗ ತಲೆದೋರಿದೆ. ಚಿತ್ರದುರ್ಗದಲ್ಲಿ ನಮಗೆ ಇದೇನೂ ಹೊಸದಲ್ಲ. ಈಗಿನ ಕಷ್ಟ ಪರಿಸ್ಥಿತಿಯಲ್ಲಿ ಮನುಷ್ಯ ಎಷ್ಟು ಕಷ್ಟ ಸಹಿಷ್ಣುತೆ ಹೊರಲು ಸಾಧ್ಯವೋ ಅಷ್ಟನ್ನು ಸಹಿಸಿಕೊಂಡಿದ್ದಾನೆ. ಪರಿಸ್ಥಿತಿ ಹತೋಟಿಗೆ ಬಾರಿದೆ. ಇದನ್ನರಿತು ಸರ್ಕಾರ ಕೆಲವು ಕಾರ್ಯಕ್ರಮ ಕೈಗೊಂಡಿದೆ. ಇನ್ನೂ ಅನೇಕವಾಗಿ ಕೈಕೊಳ್ಳುವುದಕ್ಕೆ ಮಾನ್ಯ ಸದಸ್ಯರ ಅಭಿಪ್ರಾಯ ಪಡೆಯಲು ಆ ಉದ್ದೇಶದಿಂದ ಈಗ ಅವಕಾಶವನ್ನು ಕಲ್ಪಿಸಿಟ್ಟಿದ್ದಾರೆ. ಈ ಬಗ್ಗೆ ನಾನು ಸರ್ಕಾರಕ್ಕೆ ಎರಡು ವಿಚಾರಗಳಲ್ಲಿ ಮನವಿಮಾಡಬೇಕಾಗಿದೆ. ಒಂದು ಚಿತ್ರದುರ್ಗ ಜಿಲ್ಲೆಯ ಪೂರ್ವ ಭಾಗದ ಚಳ್ಳಕೆರೆ, ಹರಿಹರ, ದಾವಣಗೆರೆ ತಾಲ್ಲೂಕುಗಳಲ್ಲಿ ಪರಿಸ್ಥಿತಿ ಹದಗೆಟ್ಟಿದೆ. ಹಿಂದೆ ಹೊಳಲ್ಕೆರೆ ಸಾಮಾನ್ಯವಾಗಿ ಕಣಜ ಎಂದು ಹೆಸರುವಾಸಿಯಾಗಿತ್ತು. ಅಂಥ ಕಡೆ ಕೂಡ ಜನರು ಕಂದಾಯ ಕೊಡಲು ಕಷ್ಟವಾಗಿದೆ. ಸೊನ್ನೆಟಿ ಮುಂತಾದ ಕಡೆಗಳಿಂದ ತೆಗೆದುಕೊಂಡಿರುವ ಸಾಲವನ್ನು ವಾಪಸ್ಸು ಕೊಡದೆ ಬಾಕಿಗಾಗಿ ಸ್ವತ್ತನ್ನು ಹರಾಜು ಮಾಡುವ ಪರಿಸ್ಥಿತಿ ಇದೆ. ಹಿಂದೆ ಕೇಳದೆ ಕೊಡುತ್ತಿದ್ದರು, ಈ ದಿವಸ ಕಡ್ಡಾಯಮಾಡಿ ಹರಾಜುಮಾಡಬೇಕಾಗಿದೆ. ಜನರಲ್ಲಿ ಹಣವಿಲ್ಲ. ಅಧಿಕಾರಿಗಳೇನೋ ತಮ್ಮ ಕರ್ತವ್ಯವನ್ನು ಮಾಡುತ್ತಿದ್ದಾರೆ. ಚಿತ್ರದುರ್ಗ ಜಿಲ್ಲೆಯಲ್ಲಿ ಸಾಮಾನ್ಯವಾಗಿ 20—30 ಇಂಚು ಮಳೆ ಬರುವುದು ನ್ಯಾಭಾವಿಕ. ಆದರೆ ಈ ಅಭಾವ ಪರಿಸ್ಥಿತಿ

(ಶ್ರೀ ಜಿ. ದುಗ್ಗಪ್ಪ)

ಯಾವ ಕಾರಣಕ್ಕಾಗಿ ಬಂತು ಎಂದರೆ ಎರಡು ಮುಖ್ಯವಾದ ಮಳೆಗಳು ನಕಾಲದಲ್ಲಿ ಬಾರದಿರುವುದು. ಅದರಲ್ಲಿ ಒಂದು ಮಳೆ ಭರಣಿ ಮಳೆ. ಅದು ಹೋದರೆ ಕಷ್ಟ. ಅನೇಕ ಕಡೆ ಜೋಳದ ಬಿತ್ತನೆ ಯಾಗಿಲ್ಲ. ರಾಗಿ ಬೆಳೆಗೆ ಬೇಕಾದ ಚಿತ್ತೆ ಮಳೆ ಬಿದ್ದಿಲ್ಲ. ಹೀಗಾದರೆ ರೈತರೇನು ಮಾಡಲು ಸಾಧ್ಯ? ರೈತರನ್ನು ನಂಬಿರುವ ಕೂಲಿಗಾರರಿಗೆ ಸಹ ಕೆಲಸವಿಲ್ಲ. ಕೊಂಡು ತಿನ್ನಲು ಕಾಳಿಲ್ಲ, ಹಣವಿಲ್ಲ. ಹೀಗಾಗಿ ಹರಪನಹಳ್ಳಿ ತಾಲ್ಲೂಕಿನಿಂದ ನೂರಾರು ಜನರು ಶಿವಮೊಗ್ಗಕ್ಕೆ ಕೆಲಸಕ್ಕಾಗಿ ಬರುತ್ತಿದ್ದಾರೆ. ಇಂಥ ಪರಿಸ್ಥಿತಿ ಇದೆ.

ನಾನು ಏಕೆ ಇವನ್ನು ಇಲ್ಲಿ ಹೇಳುತ್ತೇನೆ ಎಂದರೆ ಈ ಪರಿಸ್ಥಿತಿ ಬಾರದಂತೆ ಸರಕಾರ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಕೆಲವು ವಿಚಾರಗಳನ್ನು ಇಲ್ಲಿ ತಿಳಿಸುತ್ತೇನೆ. ಯಾವವಿಧದಲ್ಲಿ ಈ ಪರಿಸ್ಥಿತಿಯನ್ನು ಹೋಗಲಾಡಿಸಬಹುದು ಮತ್ತು ಯಾವ ಯಾವ ಕಾರ್ಯಕ್ರಮ ಗಳನ್ನು ಸರಕಾರ ತೆಗೆದುಕೊಳ್ಳಬೇಕು ಎನ್ನುವುದನ್ನು ಇಲ್ಲಿ ಹೇಳಲು ಇಷ್ಟಪಡುತ್ತೇನೆ. ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದರಲ್ಲಿ ಎರಡು ವಿಧಗಳಿವೆ, ಒಂದು ಶಾಶ್ವತವಾದ ಪರಿಹಾರ ಕಾರ್ಯಕ್ರಮಗಳು, ಇನ್ನೊಂದು ತಕ್ಷಣ ಜನರಿಗೆ ಒದಗಿರತಕ್ಕ ಕಷ್ಟಗಳನ್ನು ನಿವಾರಣೆ ಮಾಡುವುದ ಕ್ಕಾಗಿ ತಾತ್ಕಾಲಿಕವಾದ ಕೆಲವು ಕಾರ್ಯಕ್ರಮಗಳು. ಸರಕಾರ ಈ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕು. ಈ ಪರಿಸ್ಥಿತಿಗೆ ತುತ್ತಾಗಿರುವವರಿಗೆ ತಕ್ಷಣ ಕೆಲಸಗಳನ್ನು ಕೊಡಲು ಸರಕಾರ ಗೋಕಟ್ಟೆಗಳನ್ನು ಮಾಡುವುದು ಮತ್ತು ಇತರ ಉಪಯುಕ್ತವಾದ ಕೆಲಸಗಳನ್ನು ಕೊಟ್ಟರೆ ಅವರಿಗೆ ಜೀವನ ನಡೆಸಲು ಒಂದು ಮಾರ್ಗವನ್ನು ಕಲ್ಪಿಸಿಕೊಟ್ಟಂತಾಗುತ್ತದೆ. ಶಾಶ್ವತವಾದ ಪರಿಹಾರ ಕ್ರಮಗಳನ್ನು ಕೈಕೊಳ್ಳುವಲ್ಲಿ ಎಷ್ಟೋ ಕ್ರಮಗಳಿವೆ. ಅದರಲ್ಲಿ ನಮ್ಮ ಜಿಲ್ಲೆಯಲ್ಲಿ ದೇವರ ದಯ ದಿಂದ ಅನೇಕ ತಾಲ್ಲೂಕುಗಳಲ್ಲಿ ಭೂಮಿಯ ಕೆಳಗೆ ಅಂಡರ್ ಗ್ರೌಂಡ್ ವಾಟರ್ ಚೇಬರ್ ಎನ್ನುವಂತೆ ನೀರು ಮೇಲು ಭಾಗದಲ್ಲೇ ಸಿಗುತ್ತದೆ. ಇದೊಂದು ಇಲ್ಲರುವ ವೈಶಿಷ್ಟ್ಯ. ಇದನ್ನುಪಯೋಗ ಮಾಡಿಕೊಳ್ಳಲು ಇಲ್ಲ ಅನೇಕ ಕಪಿಲೆ ಬಾವಿಗಳಿವೆ, ಸಬ್‌ಸಿಡೈಸ್ಡ್ ರೂಲ್ಸ್ ಪ್ರಕಾರ ಲಿಬರಲೈಸ್ಡ್ ರೂಲ್ಸ್ ಪ್ರಕಾರ ಈಗ ಬಾವಿಗಳಿಗಾಗಿ ಗ್ರಾಂಟುಗಳನ್ನು ಕೊಡುತ್ತಿದ್ದಾರೆ. ಇದನ್ನು ಇನ್ನೂ ಹೆಚ್ಚುಮಾಡಬೇಕು. ಇತ್ತೀಚೆಗೆ ಎಷ್ಟು ಬಾವಿಗಳನ್ನು ಸರಕಾರ ಕೊಟ್ಟಿದ್ದಾರೆನ್ನುವುದಕ್ಕೆ ಕೆಲವು ಅಂಕೆ ಸಂಖ್ಯೆಗಳನ್ನು ಇಲ್ಲಿ ಕೊಟ್ಟರೆ ಚೆನ್ನಾಗಿರುತ್ತದೆ. 1962-63ನೇ ಸಾಲುಗಳಲ್ಲಿ ಅನೇಕ ಬಾವಿ ಗಳಿಗಾಗಿ ಮಂಜೂರಾತಿಯನ್ನು ಕೊಟ್ಟಿದ್ದಾರೆ. ಅದು ಹೀಗೆ ಇದೆ. ಚಿತ್ರದುರ್ಗ ಜಿಲ್ಲೆಯಿಂದ 604 ಅರ್ಜಿಗಳು ಬಂದುದಕ್ಕೆ 42 ಬಾವಿಗಳಿಗೆ ಮಂಜೂರಾತಿ ಕೊಟ್ಟಿದ್ದಾರೆ. ಚಳ್ಳಕೆರೆಯಲ್ಲಿ 380 ಅರ್ಜಿಗಳು ಬಂದುದಕ್ಕೆ 35ಕ್ಕೆ ಮಂಜೂರಾತಿಯನ್ನು ಕೊಟ್ಟಿದ್ದಾರೆ. ಹಿರಿಯೂರು ತಾಲ್ಲೂಕಿನಿಂದ 180 ಅರ್ಜಿಗಳು ಬಂದುದಕ್ಕೆ 5 ಮಂಜೂರಾಗಿವೆ. ಹೊಳಕಾಲ್ಮೂರಿನಿಂದ 212 ಅರ್ಜಿಗಳು ಬಂದುದಕ್ಕೆ 13 ಮಂಜೂರಾಗಿವೆ. ದಾವಣಗೆರೆಯಿಂದ 116 ಅರ್ಜಿಗಳು ಬಂದರೆ 5 ಬಾವಿಗಳು ಮಾತ್ರ ಮಂಜೂರಾಗಿವೆ. ಹೊಳಲ್ಕೆರೆಯಿಂದ 140 ಅರ್ಜಿಗಳು ಬಂದುದಕ್ಕೆ 10 ಮಾತ್ರ ಮಂಜೂ ರಾಗಿವೆ. ಇದನ್ನು ನೋಡಿದರೆ ಸರಕಾರದವರು ಬಾವಿಗಳನ್ನು ಕೊಡುವುದರಲ್ಲಿ ಎಷ್ಟು ತಾತ್ಸಾರ ಭಾವದಿಂದ ಇದ್ದಾರೆನ್ನುವುದು ಇದರಿಂದ ಚೆನ್ನಾಗಿ ಗೊತ್ತಾಗುತ್ತದೆ. ಇಂತಹ ಬಾವಿಗಳನ್ನು ತೋಡಲು ಬೇಗನೆ ಸರಕಾರ ಅವಕಾಶಕೊಟ್ಟರೆ ಇದರಿಂದ ಇಮ್ಮೀಡಿಯಟ್ ರಿಟರ್ನ್ ಬರುತ್ತದೆ ಮತ್ತು ಅಲ್ಲಿರುವ ಜನಕ್ಕೆ ತಕ್ಷಣ ಕೆಲಸ ಕೊಟ್ಟಂತೆಯೂ ಆಗುತ್ತದೆ. ಮತ್ತು ಅಲ್ಲಿರುವ ಜನರನ್ನು ಇನ್ನೊಬ್ಬರ ಹತ್ತಿರ ಕೆಲಸಕ್ಕೆ ಸೇರಿಸುವುದಕ್ಕೂ ಅವಕಾಶವಿರುವುದಿಲ್ಲ. ಮತ್ತು ಬಾವಿಗಳನ್ನು ಬೇಗನೆ ತೋಡುವುದರಿಂದ ರೈತರಿಗೆ ತಕ್ಕ ಪ್ರತಿಫಲ ಸಿಗುತ್ತದೆ. ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ಕಟ್ಟುವುದಕ್ಕಿಂತ ರೈತರಿಗೆ ತಕ್ಷಣ ಕೆಲಸಕೊಡುವಂತಹ ಬಾವಿಗಳನ್ನು ತೆಗೆದರೆ ರೈತ ತನ್ನ ಜಮೀ ನನ್ನೇ ಉತ್ತಮಪಡಿಸಿಕೊಳ್ಳಬಹುದು ಮತ್ತು ತನ್ನ ಆಸ್ತಿಯನ್ನು ಉತ್ತಮಪಡಿಸಿಕೊಳ್ಳಬೇಕು ಎನ್ನುವ ಆಸಕ್ತಿಯು ಅವರಲ್ಲಿರುತ್ತದೆ ಮತ್ತು ಅವರಿಗೆ ತಕ್ಷಣ ಪ್ರತಿಫಲ ಬರುತ್ತದೆ. ಶಾಶ್ವತವಾದ ಪರಿಹಾರ ಕಾರ್ಯಕ್ರಮಗಳಲ್ಲಿ ಇದೂ ಒಂದು. ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಿ ಹಿಂದೆ ಅಭಾವ ಪರಿಸ್ಥಿತಿ ಬಂದಾಗ ಆಗಿದ್ದ ರಾಜಮನೆತನದವರು ಎಂದರೆ ಶ್ರೀಮನ್ಮಾಲ್ಪಡಿ ಕೃಷ್ಣರಾಜಪೊಡೆಯ ರವರ ಕಾಲದಲ್ಲಿ ವಾಣೀವಿಲಾಸ ಸಾಗರ ಎಂಬ ಕಟ್ಟೆಯನ್ನು ಕಟ್ಟಿ ಇಂದು ಅದು ಒಂದು ದೊಡ್ಡ ಇರಿಗೇಷನ್ ಪ್ರಾಜೆಕ್ಟಾಗಿದೆ. ಇದರಿಂದ ಬಳ್ಳಾರಿ, ಹರಪನಹಳ್ಳಿ ಮತ್ತು ಚಿತ್ರದುರ್ಗ ಜಿಲ್ಲೆಗಳು ಬರಗಾಲಕ್ಕೆ ತುತ್ತಾದಾಗ ಅಲ್ಲಿನ ಜನಕ್ಕೆ ಅಲ್ಲಿ ಕೆಲಸಗಳು ಸಿಗುತ್ತಿದ್ದುವು ಎಂದು ಈಗಲೂ ಅಲ್ಲರುವ ಹಿಂದಿನ ಕೆಲವು ಪೂರ್ವಿಕರು ಹೇಳುತ್ತಿರುತ್ತಾರೆ. ಆಗಿದ್ದ ಪೂರ್ವಿಕರು ಮಾರಿ ಕಣಿವೆ ಅಥವಾ ವಾಣಿವಿಲಾಸ ಕಟ್ಟೆಯನ್ನು ರಾಜಮನೆತನದವರು ಕಟ್ಟಿದುದರಿಂದ ಇಂದು ಅದು ಒಳ್ಳೆಯ ನಂದನವನ ದಂತೆ ಆಗಿದೆ. ಈಗಲೂ ಅಲ್ಲಿನ ಜನ ನೆನಸಿಕೊಳ್ಳುತ್ತಿರುತ್ತಾರೆ. ಹಾಗೇ ಈಗ ಚಿತ್ರದುರ್ಗದ

ಹತ್ತಿರ ಜಿನಿಗೆ ಹಳ್ಳ ಎಂದು ಇದೆ. ಅದರಲ್ಲಿ ಬಿದ್ದ ಮಳೆ ನೀರು ಯಥೇಚ್ಛವಾಗಿ ಹರಿದು ಹೋಗುತ್ತಿದೆ. ಅದನ್ನು ನಾಯಕನಹಟ್ಟಿ ಕೆರೆವರೆಗೆ ತಿರುಗಿಸಿಕೊಟ್ಟರೆ ಅದರಿಂದ ನಾಯಕನ ಹಟ್ಟಿಯವರೆಗೆ ಇರತಕ್ಕ ಹಳ್ಳಿಗಳಿಗೆಲ್ಲಾ ಒಂದು ವ್ಯಾಲಿಯಂತೆ ನೀರಾವರಿಗೆ ಅನುಕೂಲವಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ಜಿಲ್ಲೆಯವರೇ ಆದುದರಿಂದ ಅವರಿಗೂ ಇದರ ಪೂರ್ಣ ಸ್ಥಿತಿ ಗೊತ್ತು. ಅವರೂ ಕೂಡ ಇದನ್ನು ಆದಷ್ಟು ಬೇಗ ಮಾಡಿಸಿಕೊಡುತ್ತೇವೆಂದು ಹೇಳಿದ್ದಾರೆ. ಅಲ್ಲದೆ ಈಗ ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ಕೆಲವು ಪ್ರಾಜೆಕ್ಟುಗಳು ಮಂಜೂರಾಗಿವೆ ಮತ್ತು ಅದಕ್ಕೆ ಹಣವೂ ಇದೆ. ಸ್ಕೀಮುಗಳು ತಯಾರೂ ಆಗಿವೆ. ಮತ್ತು ಅಲ್ಲಿ ಜನಕ್ಕೆ ಕೆಲಸವೂ ಸಿಗುತ್ತದೆ. ನಮಗೆ ತಿಳಿದ ಹಾಗೆ ಭದ್ರಾ ಪ್ರಾಜೆಕ್ಟು ಮಾಡಿದುದರಿಂದ ನಮ್ಮ ಕಡೆಯ ಎಷ್ಟೊ ಜನಗಳಿಗೆ ಅಲ್ಲಿ ಕೆಲಸ ಗಳೂ ಸಿಕ್ಕಿದವು ಮತ್ತು ಅವರು ತಮ್ಮ ಜೀವನವನ್ನೂ ಸಾಗಿಸುತ್ತಿದ್ದಾರೆ. ಈಚೆಗೆ ಒಂದು ಮಾಸ್ಟರ್ ಪ್ಲಾನ್ ಫಾರ್ ಇರಿಗೇಷನ್ ಸ್ಕೀಮ್ಸ್ ಎಂದು ಮಾಡಿ ಅದರಲ್ಲಿ ಸಣ್ಣಪುಟ್ಟ ಕೆರೆಗಳ ಕೆಲಸ ವನ್ನು ಮಾಡಲನುಕೂಲವಾಗುವಂತೆ ಮಾಡಬೇಕೆಂದು ಇದ್ದಾರೆಂದು ಕೇಳುತ್ತೇನೆ. ಆ ರೀತಿ ಮಾಡುವುದಾದರೆ ನಮ್ಮ ಭಾಗದಲ್ಲಿ ಚಳ್ಳಕೆರೆ ತಾಲ್ಲೂಕಿನಲ್ಲಿರುವ ಎಷ್ಟೋ ಕೆರೆಗಳನ್ನು ರಿಪೇರಿ ಮಾಡುವ ಕೆಲಸಗಳು ಜನಕ್ಕೆ ಅಲ್ಲಿಯೇ ಸಿಗುತ್ತದೆ. ಇನ್ನೂ ಅಂತಹ ಮಾಸ್ಟರ್ ಪ್ಲಾನ್ ಮಾಡಿಲ್ಲ. ಈಗಲಾದರೂ ಬೇಗನೆ ಅಂತಹ ಒಂದು ಪ್ಲಾನನ್ನು ತಯಾರುಮಾಡಿ ಯಾವ ಯಾವ ಕಡೆಗಳಲ್ಲಿ ಎಷ್ಟು ಅಭಿವೃದ್ಧಿ ಕ್ರಮಗಳನ್ನು ತಕ್ಷಣ ಕೈಗೊಳ್ಳಬಹುದು ಎನ್ನುವುದನ್ನು ತೆಗೆದುಕೊಂಡರೆ ಆಗ ಶಾಶ್ವತ ವಾದ ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಂಡ ಹಾಗಾಗುತ್ತದೆ ಮತ್ತು ಪದೇ ಪದೇ ವರ್ಷ್ಯೇ ವರ್ಷ್ಯೇ ಇಲ್ಲ ನಾವು ಮಳೆ ಇಲ್ಲ ಎಂದು ಹೇಳುತ್ತಲೇ ಬರುತ್ತಿದ್ದೇವೆ. ಆದ್ದರಿಂದ ಇಂತಹ ಕ್ರಮ ಗಳನ್ನು ಕೈಗೊಳ್ಳುವುದು ಸೂಕ್ತವಾಗಿ ಕಾಣುತ್ತದೆ.

ಇನ್ನೊಂದು ವಿಚಾರ ಇಲ್ಲಿ ಹೇಳಬೇಕಾಗಿರುವುದು ಬೆರೆಗಳ ವಿಚಾರಗಳು, ಬೆರೆಯಂತೂ ಇತ್ತೀಚೆಗೆ ಬಹಳ ಹೆಚ್ಚಾಗುತ್ತಾ ಹೋಗುತ್ತಿದೆ, ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಗಾಂಜೀ ವೀರಪ್ಪನವರು ಹೇಳಿದ ಹಾಗೆ ದಾವಣಗೆರೆಯಲ್ಲೇ ಒಂದು ಕ್ವಿಂಟಾಲ್ ಜೋಳಕ್ಕೆ 68 ರೂಪಾಯಿ ಗಳಷ್ಟು ಎಂದು ಆದರೆ ನಾವೆಂದೂ ಪೂರ್ವದಲ್ಲಿ ಇಷ್ಟು ಹೆಚ್ಚಿನ ಬೆರೆಯನ್ನು ಯಾವಾಗಲೂ ಕೇಳಿರ ಲಿಲ್ಲ. ಬೆರೆಗಳನ್ನು ತಡೆಯುವುದಕ್ಕೆ ಈಗಾಗಲೇ ಕೆಲವರು ಕೆಲವು ಕಾರ್ಯಕ್ರಮಗಳನ್ನು ಸೂಚಿಸಿ ದ್ದಾರೆ. ನಾನು ಒಂದು ವಿಚಾರ ಇಲ್ಲಿ ತಿಳಿಸಬೇಕಾಗಿದೆ. ಸುಗ್ಗಿಯ ಕಾಲದಲ್ಲಿ ಭತ್ತದ ಬೆಳೆ ಬರುವಾಗ ಪ್ರಾಡ್ಯೂಸ್ ಲೋನ್ ಎಂದು ಬ್ಯಾಂಕುಗಳವರು ಕೊಡುತ್ತಾರೆ. ಇದರಿಂದ ಮಧ್ಯಸ್ತ ಗಾರರಾದವರು ಬ್ಯಾಂಕುಗಳ ಗೋಡೌನುಗಳಲ್ಲಿ ಭತ್ತವನ್ನು ತುಂಬಿಕೊಂಡು ಅದರ ಬೆಲೆ ಜಾಸ್ತಿ ಯಾಗುವವರೆಗೂ ಕಾಯುತ್ತಿರುತ್ತಾರೆ. ಬೆಲೆ ಹೆಚ್ಚಾದ ಮೇಲೆ ಅದನ್ನು ತೆಗೆದುಕೊಂಡು ಮಾರಿ ಹೆಚ್ಚು ಲಾಭ ಸಂಪಾದಿಸುತ್ತಾರೆ. ಇದರಿಂದ ರೈತನಾದವನು ಬೆಳೆದ ದವಸಕ್ಕೆ ಅವನಿಗೆ ಸರಿಯಾದ ಬೆಲೆ ಸಿಗುತ್ತಿಲ್ಲ. ಅವನು ಮೊದಲೇ ಸುಗ್ಗಿಯಲ್ಲಿ ಕಡಿಮೆ ಬೆಲೆಗೆ ಮಾರಿರುತ್ತಾನೆ. ಬ್ಯಾಂಕುಗಳು ಪ್ರಾಡ್ಯೂಸ್ ಲೋನ್ ಎಂದು ದಳ್ಳಾಳಿಗಳಿಗಾಗಿ ಕೊಡುವುದರ ಮೇಲೆ ಸರಕಾರ ಸ್ವಲ್ಪ ಹತೋಟಿ ಇಟ್ಟು ಇಷ್ಟು ಮಾತ್ರ ದವಸದ ದಾಸ್ತಾನಿರಬೇಕು ಎಂದು ನಿಗದಿ ಮಾಡಬೇಕು ಮತ್ತು ಬ್ಯಾಂಕು ಗಳವರೂ ಕೂಡ ಹೆಚ್ಚಿನ ಹಣವನ್ನು ಅಡ್ವಾನ್ಸ್ ಮಾಡಬಾರದು ಎಂದು ಸೂಚನೆಗಳನ್ನು ಕೊಡ ಬಹುದು. ಹೀಗೆ ಮಾಡಿದರೆ ಈಗ ಬೆಲೆಗಳು ಕೈ ನಿಲುಕದ ಹಾಗಿರುವಂತೆ ಹೋಗಲು ಅವಕಾಶ ವಿಲ್ಲದಂತೆ ಸ್ವಲ್ಪಮಟ್ಟಿಗಾದರೂ ಚೆಕ್‌ಮಾಡಲು ಅನುಕೂಲವಾಗುತ್ತದೆ ಎಂದು ಇಷ್ಟನ್ನು ಹೇಳಿ ನನ್ನ ಮಾತಗಳನ್ನು ಮುಕ್ತಾಯ ಮಾಡುತ್ತೇನೆ.

† ಶ್ರೀ ಡಿ. ಮುನಿಚಿನ್ನಪ್ಪ (ಬೆಂಗಳೂರು ಸೌತ್).—ಸ್ವಾಮಿ, ನಾನು ಈ ಮಾನ್ಯ ಸಭೆಯಲ್ಲಿ ವಿನಂತಿ ಮಾಡಿಕೊಳ್ಳುವುದು ನಮ್ಮ ದೇಶದಲ್ಲಿ ಈಗ ಬಂದಿರತಕ್ಕ ಬರಗಾಲದ ವಿಚಾರವಾಗಿ. ಈಗಾಗಲೇ ಅನೇಕರು ಒಳ್ಳೆಯ ರಚನಾತ್ಮಕವಾದ ಸಲಹೆಗಳನ್ನು ಕೊಟ್ಟಿರುತ್ತಾರೆ. ಆದರೆ ನಮ್ಮ ತಾಲ್ಲೂಕಿನ ಬಗ್ಗೆ ಅದರ ವಿಚಾರವನ್ನು ಸ್ವಲ್ಪ ಸರಕಾರದ ಮುಂದೆ ಇಡಲು ನಾನು ಇಷ್ಟಪಡುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಯಾವ ನಾಲೆಯೂ ಇಲ್ಲ ಮತ್ತು ನಮ್ಮ ಕಡೆ ಎರಡು ಮೂರು ವರ್ಷ ಗಳಿಂದಲೂ ಸರಿಯಾಗಿ ಮಳೆಯೂ ಇಲ್ಲವೆ ಬೆಳೆಗಳೂ ಆಗದೆ ಜನ ತುಂಬಾ ಕಷ್ಟಪಡುತ್ತಲಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಸಣ್ಣ ಕೆರೆಗಳು ಮತ್ತು ಬಾವಿಗಳನ್ನು ಬಿಟ್ಟರೆ ನೀರಿಗೆ ಬೇರೆ ಆಸರೆ ಇರುವುದಿಲ್ಲ. 10-12 ವರ್ಷಗಳಿಂದಲೂ ಅಂದಾಜಾಗಿದ್ದ ಎಷ್ಟೋ ಕೆರೆಗಳನ್ನು ರಿಪೇರಿ ಮಾಡಿಲ್ಲ. ಅಂತಹ ಕೆರೆ ಗಳಿಂದ ನೀರು ಉಪಯೋಗಿಸಿಕೊಳ್ಳಲು ಅವಕಾಶವಿಲ್ಲ. ಸಣ್ಣ ನೀರಾವರಿ ಶಾಖೆಯ ಮಂತ್ರಿಗಳು ಇನ್ನು ಮುಂದಾದರೂ ಇಲ್ಲಿ ಹೆಚ್ಚು ಸಣ್ಣ ಕೆರೆಗಳ ರಿಪೇರಿ ಕೆಲಸವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದರೂ ಅವರು ಇನ್ನೂ ಅದನ್ನು ಮನಸ್ಸಿಗೆ ತೆಗೆದುಕೊಂಡಂತೆ ಕಾಣುತ್ತಿಲ್ಲ.

(ಶ್ರೀ ಡಿ. ಮುನಿಚಿನ್ನಪ್ಪ)

ನಣ್ಣ ನೀರಾವರಿ ಕೆರೆಗಳ ವಿಚಾರ ತೆಗೆದುಕೊಂಡರೆ ನಮ್ಮ ತಾಲ್ಲೂಕಿನಲ್ಲಿ ಬಹಳ ಕಡಿಮೆ ಕೆಲಸ ಗಳಾಗಿವೆ. ಕಳೆದ 10–12 ವರ್ಷಗಳಿಂದ ಅಲ್ಲಿ ಒಂದು ಕೆರೆಯ ರಿಪೇರಿಯನ್ನೂ ಸಹಿತಾ ಕೈಗೊಂಡಿಲ್ಲ. ದಯವಿಟ್ಟು ಸರ್ಕಾರದವರು ನಮ್ಮ ಕಡೆಗೆ ಅವರ ದಯೆಯನ್ನು ಹರಿಸಬೇಕೆಂದು ನಾನು ಕೇಳಿ ಕೊಳ್ಳುತ್ತೇನೆ.

ಇನ್ನು ಸರ್ಕಾರದವರು ಕೊಡತಕ್ಕ ಗ್ರಾಂಟ್ ಬಹಳ ಕಡಮೆ. ಹೆಚ್ಚಿಗೆ ಗ್ರಾಂಟನ್ನು ಕೊಡ ಬೇಕೆಂದು ನಾನು ವಿನಯದಿಂದ ಸರ್ಕಾರದವರಲ್ಲಿ ಪ್ರಾರ್ಥನೆಮಾಡಿಕೊಳ್ಳುತ್ತೇನೆ.

ಇನ್ನು ಆಹಾರ ಧಾನ್ಯಗಳ ಬೆಲೆ ದಿನದಿನಕ್ಕೂ ಏರುತ್ತಿವೆ. ಬಡವರಿಗೆ ಕೊಂಡು ತಿನ್ನುವುದು ಬಹಳ ಕಷ್ಟವಾಗಿದೆ. ಮಾನ್ಯ ಮಂತ್ರಿಗಳು ಡೆಲ್ಲಿಯಿಂದ ದಾನ್ಯಾನು ತರಿಸಿ ಇಲ್ಲಿ ಹಂಚಿಕೆ ಮಾಡುವು ದಾಗಿ ತಿಳಿಸಿದರು. ಇದನ್ನು ಇಲ್ಲಿ ಒಂದು ವಿತರಣೆಯಿಂದ ಹಂಚಿತಕ್ಕ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ನಾನು ವಿನಯದಿಂದ ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಈಗ ರೈತರೆಲ್ಲಾ ಮಳೆಯಿಲ್ಲದೆ ಬಹಳ ತೊಂದರೆಪಡುತ್ತಿದ್ದಾರೆ. ಹೀಗಿರುವಾಗ ಅವನ ಮೇಲೆ ಒಂದಕ್ಕೆ 4ರಷ್ಟು, 5ರಷ್ಟು, 6ರಷ್ಟು ಕಂದಾಯವನ್ನು ಏರಿಸಿರತಕ್ಕದ್ದು ನ್ಯಾಯವಾದುದಲ್ಲ. ಇದರಿಂದ ರೈತರಿಗೆ ಬಹಳ ಕಷ್ಟವನ್ನು ಕೊಟ್ಟಹಾಗೆ ಆಗುತ್ತದೆ. ಹೀಗೆ ರೈತರ ಬಗ್ಗೆ ಅನ್ಯಾಯ ಮಾಡದೆ ಅವರಿಗೆ ಸೂಕ್ತರೀತಿಯಲ್ಲಿ ಸಹಾಯ ಮಾಡಬೇಕೆಂದು ನಾನು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಈಗ ಕೊಡುತ್ತಿರುವ ತಕಾವಿ ಸಾಲ ಸಾಲದು. ಇದು ಕೇವಲ ಜನರ ಕಣ್ಣನ್ನೊರಿಸಿದಂತಾ ಗುತ್ತದೆ. ರೈತರಿಗೆ ಸರ್ಕಾರ ಎಲ್ಲಾ ರೀತಿಯಿಂದಲೂ ಸೌಕರ್ಯವನ್ನೊದಗಿಸಿಕೊಡಬೇಕೆಂದು ಪ್ರಾರ್ಥಿಸಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).—ಮಾನ್ಯ ಸಭಾಪತಿಗಳೇ, ಈಗ ನಮ್ಮ ಮುಂದಿರತಕ್ಕ ಕ್ಷಾಮದ ಪರಿಸ್ಥಿತಿಯ ಬಗ್ಗೆ ಈಗಾಗಲೇ ಬಹುತೇಕ ಮಾನ್ಯ ಸದಸ್ಯರು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ನಾನು ಈ ಸಭೆಗೆ ಬಂದು ಇಲ್ಲಿಗೆ ಎರಡು ವರ್ಷಗಳಾ ಯಿತು. ಆಷ್ಟರಲ್ಲಿ ನನಗೆ ಇಲ್ಲಿ ಉಂಟಾಗಿರತಕ್ಕ ಅನುಭವದಲ್ಲಿ ನಾವಿಂದು ಇಲ್ಲಿ ಈ ಕ್ಷಾಮ ಪರಿಸ್ಥಿತಿಯ ಬಗ್ಗೆ ಚರ್ಚೆ ಮಾಡುತ್ತಿರುವುದು ಇದು ಎರಡನೇ ಸಾರ್ತಿ. ಸರ್ಕಾರದವರು ಈ ವಿಚಾರ ದಲ್ಲಿ ಏನೊಂದು ನಿಲುವನ್ನು ತೆಗೆದುಕೊಂಡಿದ್ದಾರೆಂಬುದನ್ನು ನೋಡಿದರೆ ದೇಶದಲ್ಲಿ ಇಂಥಾ ಒಂದು ಪರಿಸ್ಥಿತಿ ಬಂದನಂತರವೇ ಅವರು ತಮ್ಮ ಗಮನವನ್ನು ಇತ್ತಕಡೆಗೆ ಹರಿಸುತ್ತಿದ್ದಾರೆಂಬುದು ವ್ಯಕ್ತ ವಾಗುತ್ತದೆ. ಅಂದರೆ ಇವರು ಈ ಕ್ಷಾಮವನ್ನು ಒಂದು ಶಾಶ್ವತವಾದ ಮಟ್ಟದಲ್ಲಿ ತಡೆಗಟ್ಟುವುದ ಕ್ಕೇನೂ ಪ್ರಯತ್ನಮಾಡುತ್ತಿಲ್ಲವೆಂದು ಕಂಡುಬರುತ್ತಿದೆ. ಇದು ಬಹಳ ವಿಷಾದಕರವಾದ ಸಂಗತಿ. ಇಲ್ಲಿಗೆ ಎರಡು ವರ್ಷಗಳ ಹಿಂದೆಯೇ ಶ್ರೀಮಾನ್ ಎಂ. ವಿ. ಕೃಷ್ಣಪ್ಪನವರು ಕ್ಷಾಮವನ್ನು ಶಾಶ್ವತ ವಾಗಿ ತಡೆಗಟ್ಟಲು ಸರ್ಕಾರ ಒಂದು ಶಾಶ್ವತವಾದ ನಿಲುವನ್ನು ತೆಗೆದುಕೊಳ್ಳುತ್ತಿದೆಯೆಂದು ಸಭೆಗೆ ತಿಳಿಸಿದ್ದರು. ಅಷ್ಟೇ ಅಲ್ಲ, ಅವರು ಇದಕ್ಕಾಗಿ 40 ಕೋಟಿ ರೂಪಾಯಿಗಳ ಒಂದು ಯೋಜನೆ ಯನ್ನು ತಯಾರಿಸಿ ದೇಶದಲ್ಲೆಲ್ಲೂ ಕ್ಷಾಮ ತಲೆಹಾಕದಂತೆ ಅದನ್ನು ದೇಶದಿಂದಲೇ ತೊಲಗಿಸುವು ದಾಗಿ ತಿಳಿಸಿದ್ದರು. ಆ ದಿವನ ತಿಳಿಸಿದ ಆ 40 ಕೋಟಿ ರೂ.ಗಳ ಯೋಜನೆ ಈಗ ಎಲ್ಲಿದೆ ಎಂಬುದನ್ನು ಅವರು ದಯವಿಟ್ಟು ತಿಳಿಸಬೇಕು. ಈ ದಿವನ ಸರ್ಕಾರದವರು ಬೆಂಗಳೂರು ನಗರ ವೊಂದರ ನೀರಿನ ಸರಬರಾಯಿಗಾಗಿ 26 ಕೋಟಿ ರೂಪಾಯಿಗಳ ಯೋಜನೆಯನ್ನು ತಯಾರಿಸಿ ದ್ದಾರೆ. ದೇಶದಲ್ಲಿರತಕ್ಕ ಸುಮಾರು 2 ಕೋಟಿ 30 ಲಕ್ಷ ಜನರಲ್ಲಿ ಇಲ್ಲಿಯ ಬೆಂಗಳೂರು ಸಿಟಿ ಒಂದರಲ್ಲಿ 12-13 ಲಕ್ಷ ಜನರಿದ್ದರೆ ಹೆಚ್ಚಾಯಿತು. ಇವರಿಗೆ ತೋರಿಸುತ್ತಿರುವ ಆಸಕ್ತಿಯನ್ನು ಸರ್ಕಾರದವರೇಕೆ ದೇಶದಲ್ಲಿರತಕ್ಕ ಇನ್ನುಳಿದ ಶೇಕಡ 70ರಷ್ಟು ಜನರಿಗೆ ತೋರಿಸುತ್ತಿಲ್ಲ? ಅವರ ವಿಚಾರದಲ್ಲಿ ಸರ್ಕಾರದವರಿಗೇಕೆ ಸಂತಾಪವಿಲ್ಲ? ಆದರೆ ನಾನು ಈ ಬೆಂಗಳೂರು ನಗರದಲ್ಲಿರತಕ್ಕ ಜನಗಳಿಗೆ ನೀರನ್ನೊದಗಿಸಬಾರದೆಂದು ಹೇಳುತ್ತಿಲ್ಲ. ಅಷ್ಟೇ ಆಸಕ್ತಿಯನ್ನು ಆ 40 ಕೋಟಿ ರೂಪಾಯಿಗಳ ಯೋಜನೆಯ ಬಗ್ಗೆ ಏಕೆ ತೆಗೆದುಕೊಳ್ಳುತ್ತಿಲ್ಲ ಎಂದು ಕೇಳುತ್ತಿದ್ದೇನೆ? ನಾವು ಹಣ ಕೇಳಿದರೆ ಕೇಂದ್ರದ ಕಡೆಗೆ ಕೈ ತೋರಿಸುತ್ತಾರೆ. ಅವರಿಗೆ ಇಷ್ಟ ಬಂದುದಕ್ಕಾದರೆ ಯಾವ ಅಡ್ಡಿಯೂ ಇಲ್ಲ ಎಂದರೆ ಇದು ತೀರಾ ಖಂಡನೀಯ. ನಮ್ಮ ರಾಜ್ಯ ನೀರಾವರಿ ವಿಚಾರದಲ್ಲಿ ಎಷ್ಟು ಸೌಕರ್ಯವನ್ನು ಪಡೆಯಬೇಕಾಗಿತ್ತೋ ಅಷ್ಟನ್ನು ಪಡೆದಿಲ್ಲ. ಹೀಗಾಗಿ ನಾವು ಈ ದಿವನ ಸರ್ಕಾರ ದಿಂದ ಏನೊಂದು ಫಲವನ್ನು ಅಪೇಕ್ಷಿಸಿದರೂ ಅದು ನಮಗೆ ದೊರೆಯುತ್ತಿಲ್ಲ. ಈಗಾಗಲೇ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಹೇಳಿದ ಹಾಗೆ ತಾತ್ಕಾಲಿಕ ಪರಿಹಾರ ಕಾರ್ಯಕ್ರಮದಿಂದ ನಮ್ಮ ಸಮಸ್ಯೆ ಬಗೆಹರಿಯುವುದಿಲ್ಲ. ಎಂದು ಅವರು ಹೇಳಿದ್ದನ್ನು ನಾನೂ ಒಪ್ಪುತ್ತೇನೆ.

ಚಿತ್ರದುರ್ಗ ಮತ್ತು ಹಾಸನ ಜಿಲ್ಲೆಯ ಕೆಲವು ಭಾಗಗಳಲ್ಲಿ ಮೇಜರ್ ಇರಿಗೇಷನ್ ಕೆಲಸಗಳನ್ನು ಕೈಗೊಳ್ಳಲು ಅವಕಾಶವಿದೆ. ವಿರೋಧ ಪಕ್ಷದ ಸದಸ್ಯರು ಟೀಕೆ ಮಾಡಿದರೆ ಸರ್ಕಾರದವರಿಗೆ ಕೋಪ ಬರುತ್ತದೆ. ಸ್ವರಾಜ್ಯ ಬಂದು ಇಲ್ಲಿಗೆ 17 ವರ್ಷಗಳಾಯಿತು. ಇಲ್ಲಿಯವರೆಗಾದರೂ ಈ ಸರ್ಕಾರ ಏನು ಕೆಲಸಮಾಡಿದೆ ಎಂದು ಕೇಳಿದರೆ ಸರ್ಕಾರ ತರೆತಗ್ಗಿಸಬೇಕು. ನಮ್ಮಲ್ಲಿರತಕ್ಕ ನೀರಾವರಿ ಪರ್ಸೆಂಟೇಜ್ 8 ಮಾತ್ರ. ಆದರೆ ಅಕ್ಕಪಕ್ಕದಲ್ಲಿರತಕ್ಕ ರಾಜ್ಯಗಳಲ್ಲಿ ಆಂಧ್ರದಲ್ಲಿ 46 ಪರ್ಸೆಂಟಿದ್ದರೆ, ಮದ್ರಾಸಿದಲ್ಲಿ 26 ಪರ್ಸೆಂಟಿದೆ. ನಮ್ಮ ಸರ್ಕಾರ ಬರಿಯ ಅಂದಾಜುಗಳನ್ನು ಮಾಡುವುದರಲ್ಲಿಯೇ ಕಾಲಹರಣ ಮಾಡುತ್ತಿದೆ.

ಇವತ್ತು ನಮ್ಮ ಸರ್ಕಾರ 17 ವರ್ಷಗಳಿಂದಲೂ ನಡೆಯುತ್ತಾ ಆ ಒಂದು ಅವಧಿಯಲ್ಲಿ ಬರೀ ಅಂದಾಜುಗಳನ್ನುಮಾಡತಕ್ಕ ಕಾರ್ಯದಲ್ಲಿ ತೊಡಗಿದೆ. ಕಾಂಗ್ರೆಸ್ ಪಕ್ಷದ ಬಗ್ಗೆ ಈ ವಿಚಾರದಲ್ಲಿ ಏನೂ ಟೀಕೆ ಮಾಡಬೇಕಾಗಿಲ್ಲ. ಆದರೆ ಈ ರಾಜ್ಯ ಸರ್ಕಾರದ ಮಂತ್ರಿಮಂಡಲ ಎರಡು ವರ್ಷಗಳಿಂದಲೂ ಕೆಲಸ ಮಾಡುತ್ತಿದೆ. ಈ ಎರಡು ವರ್ಷಗಳ ಕಾಲದಲ್ಲಿ 40 ಕೋಟಿ ರೂಪಾಯಿಗಳ ಅಂದಾಜನ್ನು ಮಾಡಿಸಿ ಸಾಕಾದಷ್ಟು ಮಟ್ಟಿಗೆ ಸಹಕಾರ ಸಂಘಗಳಿಗೆ ಸಹಾಯ ಕೊಡುವ ಬಗ್ಗೆ ಆ ಹಣವನ್ನು ಉಪಯೋಗಿಸುತ್ತಿದ್ದಾರೆ. ನಾನು ವೈಯಕ್ತಿಕವಾಗಿ ಹೇಳುವುದಾದರೆ ಮೇಜರ್ ಇರಿಗೇಷನ್ ಉಪಯೋಗ ಪಡೆಯುವ ಬಗ್ಗೆ ಹಿಂದಿನ ಸರ್ಕಾರಗಳು ಯಾವ ಪ್ರಯತ್ನವನ್ನೂ ಮಾಡಲಲ್ಲವೆನ್ನುವ ಬಗ್ಗೆ ಕಟುವಾಗಿ ಟೀಕೆ ಮಾಡಬೇಕಾಗಿದೆ. ಇವತ್ತು ನಾನ್-ಅಫಿಷಿಯಲ್ ರೆಜಲ್ಯೂಷನ್ನನ್ನು ಮೂವ್ ಮಾಡಿದಾಗ ಕಾವೇರಿ ಬೇಸಿನ್ ವಾಟರನ್ನು ಉಪಯೋಗಿಸುವ ಬಗ್ಗೆ ಮಾನ್ಯ ಮಂತ್ರಿಗಳು ನಾನಾ ಭರವಸೆಗಳನ್ನು ಕೊಟ್ಟಿರುವುದನ್ನು ನಾವೆಲ್ಲರೂ ಕೇಳಿದ್ದೇವೆ. ಆದರೆ ಸಭಾಪತಿಗಳ ಮೂಲಕ ಸರಕಾರದ ಪರವಾಗಿ ಒಂದು ಸ್ಪಷ್ಟವಾದ ನಿಲುವನ್ನು ಈ ಸರ್ಕಾರ ಆ ವಿಚಾರದಲ್ಲಿ ಈ ಸಭೆಗೆ ಇದುವರೆಗೂ ಕೊಟ್ಟಿದ್ದಾರೆಯೇ ಎಂದು ನಾನು ಕೇಳುತ್ತೇನೆ. ಒಂದು ಪ್ರಾಜೆಕ್ಟನ್ನು ಸಹ ಸರಿಯಾಗಿ ಮಾಡಿಲ್ಲ ವೆಂದು ನಾನು ಹೇಳಬೇಕಾಗಿದೆ. ನಮ್ಮನ್ನೆ ಅಧಿಕಾರ ಮಾಡಿ ಮಂತ್ರಿಗಳ ಸ್ಥಾನದಲ್ಲಿ ಕಾಲ ಕಳೆದು ಮನೆಗೆ ಹೋಗುವುದು ಮತ್ತು ಸಾರ್ವಜನಿಕರ ಬೊಕ್ಕಸದಿಂದ ಇವರು ತಮಗೆ ಬೇಕಾದ ಸೌಲಭ್ಯಗಳನ್ನು ಹೊಂದುವುದು—ಈ ವಿಚಾರಗಳಲ್ಲಿ ಪ್ರಜಾಪ್ರಭುತ್ವದಲ್ಲಿ ಯಾರೂ ಅಡ್ಡಿಬರುವುದಿಲ್ಲ ವೆಂದೇನಾದರೂ ಇವರು ಈ ಒಂದು ಕಷ್ಟಕಾಲದಲ್ಲಿ ಅದರಲ್ಲೂ ಕ್ಷಾಮ ಪ್ರದೇಶಗಳಿಗೆ ಶಾಶ್ವತ ಪರಿಹಾರ ಒದಗತಕ್ಕ ಈ ನಮ್ಮ ಆಹಾರ ಅಭಾವ ಪರಿಸ್ಥಿತಿಯೇನಿದೆ ಅದನ್ನು ಬಗೆಹರಿಸುವ ಬಗ್ಗೆ ಸರ್ಕಾರ ತನ್ನ ಆಸಕ್ತಿಯನ್ನು ತೋರಿಸಿ ಖಾಯಂ ಆಗಿ ಮೇಜರ್ ಇರಿಗೇಷನ್ ಪ್ರಾಜೆಕ್ಟುಗಳನ್ನು ಮಾಡುವುದು ಸಾಧ್ಯ. ಮಾನ್ಯ ಶ್ರೀ ಕೃಷ್ಣಪ್ಪನವರು ಮೈನರ್ ಇರಿಗೇಷನ್ನಿನಿಂದ ಬಹಳ ಕಡೆ ಜೆನ್ನಾಗಿ ಪ್ರತಿಫಲ ಕೊಟ್ಟಿದೆ, ಭಾವಿಗಳನ್ನು ತೆಗೆಯುತ್ತಿದ್ದೇವೆ. ತಾತ್ಕಾಲಿಕವಾಗಿ ಪರಿಹಾರ ದೊರೆಯಬಹುದು, ಎಂದು ಹೇಳಿದ್ದಾರೆ. ಶ್ರೀಮಾನ್ ಆಲೂರು ಹನುಮಂತಪ್ಪನವರಿಗೆ ಈ ಬಗ್ಗೆ ಕಂಪ್ಲೇಂಟ್ ಮಾಡಿದ್ದೇವೆ. ಮೇಜರ್ ಇರಿಗೇಷನ್ ಮಾಡಿ ಅದರಿಂದ ಬರತಕ್ಕ ನೀರನ್ನು ಸ್ಟೋರ್ ಮಾಡಿ ಇಂತಹ ಕ್ಷಾಮ ಪ್ರದೇಶಗಳಿಗೆ ಶಾಶ್ವತ ಪರಿಹಾರವನ್ನು ದೊರಕಿಸುವುದಕ್ಕೆ ಸಾಧ್ಯವೆಂದು ನಾನು ಹೇಳುತ್ತೇನೆ. ಇನ್ನು ನನ್ನ ಜಿಲ್ಲೆ ವಿಚಾರವಾಗಿ ಒಂದೆರಡು ಮಾತುಗಳನ್ನು ಈ ಸಭೆಯ ಮುಂದೆ ತಿಳಿಸ ಬೇಕೆಂದಿಚ್ಛಿಸುತ್ತೇನೆ. ಇವತ್ತು ಹಾಸನ ಜಿಲ್ಲೆಯಲ್ಲಿ ಹೊಳೇನರಸೀಪುರದ ತಾಲ್ಲೂಕಿನೊಳಗೆ ಮಾನ್ಯ ಮಂತ್ರಿಗಳ ಪ್ರವಾಸ ಕಾಲದಲ್ಲಿ ಅವರು ಕಣ್ಣಿನಿಂದ ನೋಡಿ ಬಹಳ ವ್ಯಥೆಪಟ್ಟು ಸಂಬಂಧಪಟ್ಟ ಅಧಿಕಾರಿಗಳ ಸ್ಥಳದಲ್ಲಿಯೇ ಆಜ್ಞೆ ಕೊಟ್ಟರು. ಆದೇಶ ಕೊಟ್ಟರು. ಕೆಲವು ರಿಲೀಫ್ ವರ್ಕ್ಸನ್ನು ನನ್ನ ಕ್ಷೇತ್ರದಲ್ಲಿ ಪ್ರಾರಂಭ ಮಾಡಿದ್ದಾರೆ. ಆದ್ದರಿಂದ ನಾನು ಮಾನ್ಯ ಶ್ರೀ ಕೃಷ್ಣಪ್ಪನವರಿಗೆ ಅಭಾರಿಯಾಗಿದ್ದೇನೆ. ಇವತ್ತಿನ ದಿವಸ ಏನು ತಾತ್ಕಾಲಿಕವಾಗಿ 4-6 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಪರಿಹಾರ ಕ್ರಮಗಳನ್ನು ಕೈಗೊಂಡಿದ್ದಾರೋ ಇದರಿಂದ ಸಾಕಷ್ಟು ಏನು ನಿರೀಕ್ಷಣೆ ಮಾಡಿತ್ತೋ ಅದು ದೊರೆಯುತ್ತಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಡಿವಿಜನರ್ ಬಜೆಟ್‌ನಲ್ಲಿ ಹಣವನ್ನು ಅಲಾಟ್ ಮಾಡಿದ್ದಾರೆ. ಆ ಹಣವನ್ನು ಅವರು ಉಪಯೋಗಿಸಬೇಕೆಂದು ತಿಳಿಸಿದ್ದಾರೆ. ಡಿವಿಜನರ್ ಕಮಿಷನ್ನಿನವರು ಬಜೆಟ್ಟಿನಲ್ಲಿ ಎಷ್ಟು ಹಣವನ್ನು ಒದಗಿಸಿದ್ದಾರೋ ಅದನ್ನು ಬೇರೆ ಬೇರೆ ತಾಲ್ಲೂಕುಗಳಿಗೆ ಹಂಚಿದ್ದಾರೆ. ಕೇವಲ 3-4 ಸಾವಿರ ರೂಪಾಯಿಗಳನ್ನು ಮಾತ್ರ ನನ್ನ ಕ್ಷೇತ್ರಕ್ಕೆ ಕೊಟ್ಟಿದ್ದಾರೆ. ಇವತ್ತು ನಿರೀಕ್ಷಣೆ ಮಾಡಿದಷ್ಟು ಪರಿಹಾರ ಕ್ರಮ ನಮಗೆ ದೊರಕಿಲ್ಲ. ಜೊತೆಗೆ ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್ ಮತ್ತು ತಕಾವಿ ಲೋನ್ ಎಂದು ನಾಲ್ಕೈದು ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಸ್ಥಳೀಯ ಅಧಿಕಾರಿಗಳು ಕಳುಹಿಸಿರುವ ವರದಿಯನ್ನು ಪರಿಶೀಲನೆಮಾಡಿ ಸೂಕ್ತ ಪರಿಹಾರವನ್ನು ಅಭಾವ ಪ್ರದೇಶಗಳ ಜನರಿಗೆ ಕೊಡುವುದು ಸರ್ಕಾರದ ಆದ್ಯ ಕರ್ತವ್ಯವೆಂದು ನಾನು ತಿಳಿಸುತ್ತೇನೆ. ನನ್ನ ತಾಲ್ಲೂಕಿನಲ್ಲಿ ರಾಗಿಯನ್ನು 1 ರೂಪಾಯಿಗೆ 1¾ ಸೇರಿನಂತೆ ಮಾರುತ್ತಿದ್ದಾರೆ. ಅದನ್ನು ಜೊಕ್ಕಟ ಮಾಡಿದರೆ, ಮಣ್ಣು ತೆಗೆದರೆ 1½ ಸೇರು ಆಗುತ್ತದೆ. ಜನ ಇಂತಹ ಪರಿಸ್ಥಿತಿಯಲ್ಲಿದ್ದಾರೆ. ಆದ್ದರಿಂದ ಸಾಧ್ಯವಾದಷ್ಟು ಜಾಗ್ರತೆಯಾಗಿ ಫೇರ್‌ಫೈ ಕ್ಸನ್ ಡಿಪ್ರೇಗಳನ್ನು

(ಶ್ರೀ ಎಚ್. ಡಿ. ದೇವೇಗೌಡ)

ತೆಗೆಯಬೇಕು. ಎಂಬುದಾಗಿ ರೆವಿನ್ಯೂ ಅಧಿಕಾರಿಗಳಿಗೆ ತಿಳಿಸಬೇಕು. ದನಕರುಗಳೂ ಸಹ ಹುಲ್ಲು ಇಲ್ಲದೆ ಬಹಳ ಕಷ್ಟ ಸ್ಥಿತಿಯಲ್ಲವೆ. ಇದರ ಬಗ್ಗೆ ಸರ್ಕಾರ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಂಡು ಜನಗಳಿಗೆ ಒದಗಿರತಕ್ಕ ಅಭಾವ ಪರಿಸ್ಥಿತಿಯನ್ನು ಕೂಡಲೇ ಹೋಗರಾಡಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಅಣ್ಣಾರಾವ್ ಗಣಮುಖ (ಆಫ್‌ಜಲ್‌ಪುರ್).—ಸ್ವಾಮಿ, ಆಹಾರಧಾನ್ಯಗಳ ಬೆಲೆಗಳ ಏರಿಕೆಯ ವಿಷಯವಾಗಿ ನಾನು ಕೆಲವು ಮಾತುಗಳನ್ನು ಆಡಬಯಸುತ್ತೇನೆ. ಮೊದಲನೆಯದಾಗಿ ನಮ್ಮ ಇಡೀ ದೇಶ ಒಂದೇ ಮಾರ್ಗವಾಗಿರಬೇಕು ಎಂಬುದಾಗಿ ನಾನು ಹೇಳುತ್ತೇನೆ. ಐಡಿಯಲ್ ಆಗಿರಬೇಕು ಒಂದೇ ಮಾದರಿ ವ್ಯಾಪಾರ, ಮಾರ್ಕೆಟ್ ಇರಬೇಕು ಇಡೀ ದೇಶದಲ್ಲೆಲ್ಲಾ ಒಂದೇ ತರಹ ಮಾರ್ಕೆಟ್ ಇರಬೇಕು, ದರಗಳೆಲ್ಲಾ ಒಂದೇ ಸಮನಾಗಿರಬೇಕು. ದೇಶದಲ್ಲಿ ಮಾದರೀ ಮಾರ್ಕೆಟ್ ಆಗಿರಬೇಕಾದರೆ ನಿಜವಾಗಿ ಅಂತಹ ಪರಿಸ್ಥಿತಿ ಇದ್ದೇ ತೀರಬೇಕು. ಆದರೆ ನಮ್ಮಲ್ಲಿ ಆಹಾರಧಾನ್ಯಗಳ ಮತ್ತು ಇತರ ದವಸಗಳ ಅಭಾವ ಇರುವ ಮೂಲಕ ಕೆಲವು ಪ್ರದೇಶಗಳನ್ನು ಒಟ್ಟುಗೂಡಿಸಿ ಬ್ಲಾಕೆಟ್‌ಮಾಡಿ ಆಹಾರ ಪದಾರ್ಥಗಳ ಬೆಲೆಗಳನ್ನು ಹೆಚ್ಚಿಸಿದ್ದಾರೆ. ಅದರಿಂದ ಬಹಳ ಮಟ್ಟಿಗೆ ಸ್ಕೇರ್ಸಿಟಿ ಬಂದಿದೆ. ಬೆಲೆಗಳಂತೂ ಏರುತ್ತಾ ಇವೆ. ಬೇರೆ ಪ್ರದೇಶಗಳಲ್ಲಿರತಕ್ಕ ಬೆಲೆಗಳನ್ನೂ ಮತ್ತು ಮೈಸೂರು ಸಂಸ್ಥಾನದಲ್ಲಿನ ಆಹಾರ ಪದಾರ್ಥಗಳ ಬೆಲೆಗಳನ್ನು ಹೋಲಿಸಿದರೆ ಇಡೀ ದೇಶದ ಈ ಒಂದು ಅಭಾವ ಪರಿಸ್ಥಿತಿಯಿಂದ ಬೆಲೆಗಳು ಏರಿದೆಯೇ ವಿನಹ ಮೈಸೂರು ಸಂಸ್ಥಾನಕ್ಕೆ ಮಾತ್ರ ಈ ಅಭಾವ ಪರಿಸ್ಥಿತಿ ಬಂದಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಈಗ ಜೋನ್ಸ್ ಏನು ಬಂದಿದೆ ಅದರಲ್ಲಿ ಮದ್ರಾಸ್, ಆಂಧ್ರ ಪ್ರದೇಶಗಳು ನಪ್ಲಸ್ ಏರಿಯಾವೆಂದು ಹೇಳುತ್ತಾ ಇದ್ದಾರೆ. ಆದರೆ ಕೇರಳ ಮತ್ತು ಮೈಸೂರು ಈ ಎರಡು ಬಹಳ ವೀಕ್ ಎಂದು ಡಿಫಿಸಿಟ್ ಏರಿಯಾವೆಂದು ಕೂಡಿಸಿ ಬಿಟ್ಟಿದ್ದಾರೆ ಸರ್‌ಪ್ಲಸ್ ಏರಿಯಾ ಇವು ಈಗ ಆಗಬೇಕೆಂದು ಪ್ರಯತ್ನ ಮಾಡಬೇಕೆಂದಿದ್ದಾರೆ. ಆದರೆ ರಾಜ್ಯ ಸರ್ಕಾರದವರು ಈ ಜೋನಲ್ ಸಿಸ್ಟಂನಲ್ಲಿ ಫೇಲ್ ಆಗಿದ್ದಾರೆ. ಲೆವಿಸಿಸ್ಟಂನಲ್ಲಿ ಸರ್ಕಾರದವರು ಧಾನ್ಯ ತೆಗೆದುಕೊಂಡು ತಮ್ಮ ವಶದಲ್ಲಿಯೇ ಇಟ್ಟುಕೊಂಡು ಮಾರ್ಕೆಟ್ಟಿನಲ್ಲಿ ಬರಗೊಡದೆ ಅದನ್ನು ತನ್ನಲ್ಲಿಯೇ ಇಟ್ಟುಕೊಂಡು ಕೂತರೇ ಮಾರ್ಕೆಟ್ಟಿನಲ್ಲಿ ಅವುಗಳ ಬೆಲೆಗಳು ತಮ್ಮಷ್ಟಕ್ಕೆ ತಾವೇ ಏರುತ್ತವೆ. ಈಗ 2-3 ಜೋನ್ಸ್ ಎಂದು ಮಾಡಿ ಫುಡ್ ಮಿನಿಸ್ಟರ್ ಮಾಡಿಯಾವ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದಾರೋ ಅದು ಬಹಳ ಯೋಗ್ಯವಾದುದು ಇರತಕ್ಕ ಧಾನ್ಯಗಳು ಫ್ರೀ-ಫ್ಲೋ ಆಗಬೇಕು, ಇಲ್ಲದಿದ್ದರೆ ಅಂತಹ ಜೋನ್ಸ್ ಆಗಬಾರದು. ಅನಿವಾರ್ಯವಾಗಿ ಬೇಕಾದರೆ ಜೋನ್ಸ್ ಮಾಡಬಹುದು. ಇದರಿಂದ ಕೆಲವು ಜನಗಳಿಗೆ ಬಹಳ ತೊಂದರೆಯಾಗುತ್ತದೆ. ಮತ್ತೆ ಕೆಲವು ಜನಗಳಿಗೆ ರಾಭವಾಗುತ್ತದೆ. ವೆಸ್ಟ್ ಬಂಗಾಳ, ಮತ್ತು ಒರಿಸ್ಸಾ ಇತರ ಪ್ರಾಂತಗಳಿಂದ ಅಕ್ಕಿ ಬಿಹಾರಕ್ಕೆ ಹೋಗುತ್ತದೆ. ನಮ್ಮಲ್ಲಿ ಮೈಸೂರು ಮತ್ತು ಆಂಧ್ರ ಪ್ರಾಂತಗಳು ಒಂದು ಕಡೆ ಇದ್ದರೆ ನಮ್ಮಲ್ಲಿರತಕ್ಕ ಜೋಳ ಮಹಾರಾಷ್ಟ್ರಕ್ಕೆ ಹೋಗುತ್ತದೆ. ಎಲ್ಲಿ ಹೋಗಬೇಕೋ ಅಲ್ಲಿಗೆ ಹೋಗುವುದಿಲ್ಲ. ಆಹಾರದ ಕೊರತೆ ಎಲ್ಲಿ ಇದೆಯೋ ಅಲ್ಲಿ ಆಹಾರ ಸಾಕಷ್ಟು ಸರಬರಾಜು ಆಗುವುದಿಲ್ಲ, ಇದೇ ರೀತಿಯೂ ಜೋನಲ್ ಸಿಸ್ಟಂ ಫೇಲ್ಯೂರ್ ಆಗಿ ಪಂಜಾಬಿನಲ್ಲಿ ಗೋಧಿ ಇಸ್ಕೊಂದು ದೇಶಕ್ಕೆ ಹೋಗುತ್ತದೆ. ಬೇರೆ ಬೇರೆ ಪ್ರದೇಶಗಳಿಗೆ ಹೋಗುತ್ತದೆಯೇ ವಿನಹ ಡೆಲ್ಲಿಗೆ ಬರುವುದಿಲ್ಲ. ಇದರೊಳಗೆ ಇಂಟರ್ ಸ್ಟೇಟ್ ಜೋನಲ್ ಸಿಸ್ಟಂ ಇದ್ದ ಹಾಗೆ ನನಗೆ ಕಾಣುತ್ತದೆ. ಕೇಂದ್ರ ಸರ್ಕಾರದಿಂದ ಬರತಕ್ಕ ಅಕ್ಕಿಯನ್ನು ಆಂಧ್ರ ಸರ್ಕಾರದವರು ಲೆವಿಸಿಸ್ಟಂ ಮೇಲೆ ಕಮ್ಮಿ ಬೆಲೆಯಲ್ಲಿ ತೆಗೆದುಕೊಳ್ಳುವುದರಿಂದ ತುಂಬಾ ಹಾನಿಯಾಗುತ್ತದೆ. ಅದನ್ನು ಕೂಡಿಹಾಕುವುದಕ್ಕೋಸ್ಕರ ಜನ ಹೆಚ್ಚಿನ ಬೆಲೆಯನ್ನು ಕೊಡುತ್ತಾರೆ. ಇಲ್ಲಿನ ವ್ಯಾಪಾರಸ್ಥರು ಹೆಚ್ಚಿನ ಬೆಲೆಗೆ ತಂದು ಮಾರುತ್ತಾರೆ. ತಮಗೆ ಮಾರ್ಜಿನ್ ಇಟ್ಟುಕೊಂಡೇ ಮಾರುತ್ತಾರೆ. ಈ ಬೆಲೆ ಏನಿದೆ ಅದು ಇಡೀ ದೇಶಕ್ಕೆ ಸಂಬಂಧಪಟ್ಟುದ್ದು ಆಗಿದೆ. ಅದಕ್ಕೊಂದು ದೊಡ್ಡ ಔಷಧಿ ಅಂದರೆ ಉತ್ಪನ್ನ ಹೆಚ್ಚಿಗೆ ಆಗಬೇಕು. ನಮ್ಮಲ್ಲಿ ಹೆಚ್ಚು ಬೆಳೆದುದು ಇನ್ನೊಂದು ಕಡೆ ಹೋಗುತ್ತದೆ. ಈ ಜೋನಲ್ ಸಿಸ್ಟಂನಿಂದ ಗಂಡಾಂತರ ಪರಿಸ್ಥಿತಿಯೊದಗಿದೆ. ಇಡೀ ದೇಶಕ್ಕೆ ಒಂದು ಮಾರ್ಕೆಟ್ ಆಗಬೇಕೆಂದು ಹೇಳುವುದನ್ನು ಎಲ್ಲರೂ ಒಪ್ಪತಕ್ಕ ಮಾತಾಗಿದೆ. 16-17 ವರ್ಷಗಳಾದರೂ ಕೂಡ ಇವರು ಏಷ್ಟೇ ಪ್ಲಾನುಗಳನ್ನು ಮಾಡಿದರೂ ಆಹಾರ ಸರಬರಾಜಿನ ವ್ಯವಸ್ಥೆಯನ್ನು ಸರಿಯಾಗಿ ಮಾಡಿಲ್ಲ. ಹಡಗುಗಳಿಂದ ಸಾಮಾನುಗಳು ಬರುತ್ತವೆ. ಕೊರತೆ ಎಲ್ಲಿ ಇದೆಯೋ ಅಲ್ಲಿ ಅದನ್ನು ಹಂಚಬೇಕು ಎಂದು ನಾನು ಹೇಳುತ್ತೇನೆ. ಮೊದಲನೆಯದಾಗಿ ಕೇಂದ್ರ ಸರ್ಕಾರದಲ್ಲಿ ಡಿಫೆನ್ಸಿಗೆ ಸಂಬಂಧವಾಗಿರತಕ್ಕ ಗೋಡೌನಿನಲ್ಲಿ ಬೇಕಾದಷ್ಟು ಸ್ಟಾಕ್ ಇದೆ. ಎಲ್ಲೆಲ್ಲಿ ಬೆಲೆಗಳು ಏರಿವೆಯೋ ಅಲ್ಲಿ ಫ್ರೀಯಾಗಿ ಸರ್ಕಾರದವರು ಆಹಾರ ಸಾಮಾಗ್ರಿಗಳನ್ನು ಏಕೆ ಕೊಡುವುದಿಲ್ಲವೆಂದು ನಾನು ಕೇಳುತ್ತೇನೆ.

5-30 P.M.

ನಮ್ಮ ಸರ್ಕಾರದವರೇನೋ ಲೆವಿಸಿಸ್ಟಮ್ ತೆಗೆದುಕೊಂಡರು. ಆದರೆ ಸ್ಟಾಕು ಇಲ್ಲ. ಕೇಂದ್ರ ಸರ್ಕಾರದವರೂ ಸಹ ಸ್ಟಾಕು ಎಷ್ಟಿದೆ ಎಂಬುದನ್ನು ಹೇಳಲಿಲ್ಲ. ಆಹಾರ ಧಾನ್ಯಗಳ ಡಿಫಿಸಿಟ್ ಇದ್ದರೆ ಬೆಲೆಗಳು ಬಹಳವಾಗಿ ಏರುತ್ತವೆ. ಆದ್ದರಿಂದ ಕೇಂದ್ರ ಸರ್ಕಾರದವರು ಆಹಾರ ಧಾನ್ಯವನ್ನು ಸ್ಟೇಟ್ ಗೌರ್ನಮೆಂಟಿಗೆ ಕೊಡಬೇಕು. ದೇಶದಲ್ಲಿ ಅಭಾವ ಪರಿಸ್ಥಿತಿ ಇದ್ದು, ಸಾಕಷ್ಟು ಆಹಾರ ಧಾನ್ಯಗಳ ಸ್ಟಾಕ್ ಇಲ್ಲದೆ ಇದ್ದರೆ ಮಾರ್ಕೆಟ್ ರೇಟ್ ಹೆಚ್ಚಾಗುತ್ತದೆ. ಬೆಲೆಗಳು ಏರುತ್ತವೆ. ಸ್ಕೇರ್ಸಿಟಿ ಕ್ರಿಯೇಟ್ ಆಗುತ್ತದೆ. ಆದ್ದರಿಂದ ಈ ಲೆವಿಸಿಸ್ಟಮ್ ತೆಗೆದುಹಾಕುವುದು ಬಹಳ ಉತ್ತಮ ಎನಿಸುತ್ತದೆ. ಈ ರೀತಿ ಆಹಾರ ಧಾನ್ಯಗಳ ಮತ್ತು ಇತರೆ ಸಾಮಾನುಗಳ ಬೆಲೆಗಳು ಏರುವುದಕ್ಕೆ ಇನ್ನೊಂದು ಕಾರಣ ಇದೆ. ಅದೇನೆಂದರೆ ಈ ರೊಕ್ಕ ಏನಿದೆ ಇದರ ಬೆಲೆಯೂ ಸಹ ಕಡಿಮೆ ಆಗಿದೆ. 1939ನೇ ಇಸವಿಯಲ್ಲಿ ಒಂದು ರೂಪಾಯಿಗೆ ಇದ್ದಂತಹ ಬೆಲೆಯನ್ನು ಈಗ ಇರತಕ್ಕಂಥ ಬೆಲೆಯನ್ನು ನೋಡುವುದಾದರೆ ಈಗ ಒಂದು ರೂಪಾಯಿನ ಬೆಲೆಯು ಇಳಿದು ಅದರ ಬೆಲೆ 25 ನಯಾಪೈಸೆ ಆಗಿದೆ ಎಂದು ಅರ್ಥಶಾಸ್ತ್ರಜ್ಞರು ಹೇಳುತ್ತಾರೆ. ಹೀಗಾದರೆ ಬೆಲೆಗಳು ಏತಕ್ಕೆ ಏರುವುದಿಲ್ಲ? ಉತ್ಪತ್ತಿ ಕಡಿಮೆಯಾಗಿದೆ. ಸಾಮಾನುಗಳ ಸಪ್ಲೈ ಬಹಳ ಹೆಚ್ಚಾಗಿದೆ. ಕರೆನ್ಸಿ ಹೆಚ್ಚಾಗಿದೆ. ಪ್ರೊಡಕ್ಷನ್ ಕಡಿಮೆಯಾಗಿದೆ. ಇನ್‌ಫ್ಲೇಷನ್ ಹಣದ ಅತಿಪ್ರಸಾರ ಬಹಳ ಹೆಚ್ಚಾಗಿದೆ. ಡಿಫಿಸಿಟ್ ಫೈನಾನ್ಸ್ ಅನ್ನು ತಪ್ಪಿಸಬೇಕು. ಬೆಲೆಗಳು ಏರುತ್ತವೆ, ನಮ್ಮ ರೊಕ್ಕದಲ್ಲಿ ಶಕ್ತಿಯಿಲ್ಲ. ಮಾರ್ಕೆಟ್ ತತ್ತರಿಸುತ್ತಿದೆ. ಪ್ರತಿಯೊಂದು ವಸ್ತುವಿನ ಬೆಲೆಯೂ ಹೆಚ್ಚಾಗಿದೆ. ಕಾಯಿಪಲ್ಯ, ಮಿರ್ಚಿ, ಆಹಾರ ಎಲ್ಲಾ ಪದಾರ್ಥಗಳ ಬೆಲೆಗಳು ಹೆಚ್ಚಾಗಿವೆ. ಈಗ ಸರ್ಕಾರದವರು ಏನು ಖರ್ಚುಮಾಡುತ್ತಾರೆಯೋ ಅದನ್ನು ಸ್ವಲ್ಪ ಕಡಿಮೆ ಮಾಡಬೇಕು. ಡಿಫಿಸಿಟ್ ಬಜೆಟ್ಟನ್ನು ನಿಲ್ಲಿಸಿದರೆ ಒಳ್ಳೆಯದು. ಕೇಂದ್ರ ಸರ್ಕಾರದ ಮಂತ್ರಿಗಳು ಅಡ್ಮಿನಿಸ್ಟ್ರೇಷನ್ ಖರ್ಚಿನಲ್ಲಿ 7 ಕೋಟಿ ರೂಪಾಯಿಗಳನ್ನು ಕಡಿಮೆ ಮಾಡಿಕೊಂಡಿದ್ದಾರೆಂದು ಹೇಳುತ್ತಾರೆ. ಆದ್ದರಿಂದ ನಮ್ಮ ಮಂತ್ರಿಗಳೂ ಕೂಡ ಅಡ್ಮಿನಿಸ್ಟ್ರೇಷನ್ ಖರ್ಚನ್ನು ಕಡಿಮೆಮಾಡಿಕೊಳ್ಳಬಹುದು. ಎಲ್ಲಾ ಸಾಮಾನುಗಳ ಬೆಲೆಗಳೂ ಏರಿವೆ, ಆಹಾರ ಧಾನ್ಯಗಳು ಮಾರ್ಕೆಟ್ಟಿನಲ್ಲಿ ಏನಾದರೂ ಹೆಚ್ಚಿಗೆ ಬಂದರೆ ಬೆಲೆಗಳು ಕಡಿಮೆಯಾಗಬಹುದು. ಮೊನ್ನೆ ಡಿಲ್ಲಿಯಲ್ಲಿ ಪುಡ್ ಮಿನಿಸ್ಟರ್ಸ್ ಕಾನ್ಫರೆನ್ಸ್‌ನಲ್ಲಿ ನಡೆದಂತಹ ಚರ್ಚೆಯ ವಿಷಯವನ್ನು ನಾವು ಪತ್ರಿಕೆಯಲ್ಲಿ ಓದಿದ್ದೇವೆ. ಅದರಲ್ಲಿ ಮೈಸೂರಿನ ಉಲ್ಲೇಖ ಇಲ್ಲ. ಕೇರಳದಲ್ಲಿ ಡಿಫಿಸಿಟ್ ಇದೆ ಎಂದು ಹೇಳಿದ್ದಾರೆ. ಆದರೆ ಮೈಸೂರಿನ ವಿಷಯದಲ್ಲಿ ಸರ್‌ಪ್ಲಸ್ಸೂ ಇಲ್ಲ. ಡಿಫಿಸಿಟ್ಟೂ ಇಲ್ಲ. ಅದರ ಹೆಸರೇ ಇಲ್ಲ. ಈಗ ನಮ್ಮ ರಾಜ್ಯದಲ್ಲಿ ಯಾರ ಯಾರ ಹತ್ತಿರ ಎಷ್ಟೆಷ್ಟು ಆಹಾರ ಧಾನ್ಯ ಸ್ಟಾಕ್ ಇದೆ ಎಂಬುದನ್ನು ಪತ್ತೆ ಹಚ್ಚಬೇಕು. ಹೆಚ್ಚು ಆಹಾರ ಧಾನ್ಯವನ್ನು ಉತ್ಪಾದನೆ ಮಾಡುವುದಕ್ಕೆ ಸರ್ಕಾರದವರು ಸಹಾಯ ಮಾಡಬೇಕೆಂದು ಎಲ್ಲಾ ಸದಸ್ಯರೂ ಅರಿಕೆಮಾಡಿಕೊಂಡಿದ್ದಾರೆ. ಶ್ರೀಮಾನ್ ಗೋಪಾಲಗೌಡರು ಈ ಆಹಾರ ಧಾನ್ಯಗಳ ವ್ಯಾಪಾರವನ್ನು ಸರ್ಕಾರದವರು ಮಾಡಬೇಕು. ಎಲ್ಲಾ ಕಡೆಗಳಲ್ಲಿಯೂ ಅಂಗಡಿಗಳನ್ನು ಸ್ಥಾಪನೆಮಾಡಿ ಆಹಾರ ಧಾನ್ಯಗಳ ವಿತರಣೆಯನ್ನು ಮಾಡಬೇಕು ಎಂದು ಹೇಳಿದರು. ಇಡೀ ನಮ್ಮ ಭಾರತದಲ್ಲಿ ಒಟ್ಟು 77 ಸಾವಿರ ಸಹಕಾರ ಸಂಘಗಳಿವೆ. 13 ಸಾವಿರ ಫೇರ್‌ಪ್ರೈಜ್ ಷಾಪುಗಳಿವೆ. ಆಹಾರ ಧಾನ್ಯವನ್ನು ಮಾರತಕ್ಕ ವರ್ತಕರ ಸಂಖ್ಯೆ 7 ಮಿಲಿಯನ್ ಇದೆ. ಇಷ್ಟು ಜನಗಳು ಮಾಡತಕ್ಕ ಕೆಲಸವನ್ನು ಸರ್ಕಾರದವರು ಮಾಡುವುದಕ್ಕೆ ಸಾಧ್ಯವಿದೆಯೇ ಎಂಬುದನ್ನು ವಿಚಾರ ಮಾಡಬೇಕು. ಇವೊತ್ತು ಸರ್ಕಾರದವರು ಯಾವುಯಾವುದು ಅಂತಾ ಮಾಡುತ್ತಾರೆ. ಎಲ್ಲಾ ಕಡೆಗಳಲ್ಲಿಯೂ ವ್ಯವಸ್ಥೆಮಾಡುವುದಕ್ಕೆ ಹೋದರೆ ಅಲ್ಲೆಲ್ಲಾ ಅವ್ಯವಸ್ಥೆಯಾಗುತ್ತದೆ. ಈ ಕಾರ್ಯವನ್ನು ಸರ್ಕಾರದವರೇ ವಹಿಸಿಕೊಂಡರೆ ಚಿನ್ನದ ನಿಯಂತ್ರಣದಿಂದ ಅಕ್ಕಸಾಲಿಗರ ಸಮಸ್ಯೆ ಉದ್ಭವಿಸಿದಂತೆ ಇನ್ನೊಂದು ಸಮಸ್ಯೆ ಉದ್ಭವಿಸುವುದು. ಆದ್ದರಿಂದ ಸರ್ಕಾರದವರೇ ಈ ಆಹಾರ ಧಾನ್ಯಗಳ ವ್ಯಾಪಾರವನ್ನು ಮಾಡಿದರೆ ನಮ್ಮ ದೇಶದ ಆಹಾರ ಧಾನ್ಯದ ಸಮಸ್ಯೆ ಬಗೆಹರಿಯುವುದಿಲ್ಲ. ಈ ಆಹಾರ ಧಾನ್ಯಗಳ ಡಿಫಿಸಿಟ್ ಹೋಗಬೇಕಾದರೆ ಉತ್ಪಾದನೆ ಹೆಚ್ಚಾಗಬೇಕು. ವ್ಯವಸಾಯೋತ್ಪನ್ನವನ್ನು ಹೆಚ್ಚು ಮಾಡುವುದಕ್ಕೆ ಸರಕಾರದವರು ಎಲ್ಲಿಯವರೆಗೆ ಗಮನವನ್ನು ಕೊಡುವುದಿಲ್ಲವೋ ಅಲ್ಲಿಯವರೆಗೂ ಇದರ ಸಮಸ್ಯೆ ಬಗೆಹರಿಯುವುದಿಲ್ಲ. ಒಂದು ದೊಡ್ಡ ಕೈಗಾರಿಕೆಯ ಮೇಲೆ ಬಂಡವಾಳವನ್ನು ಹಾಕಿದರೆ ಅದರಲ್ಲಿ 20 ಪರ್ಸೆಂಟ್ ರಿಟರ್ನ್ ಬರುತ್ತದೆ ಎಂದು ಹೇಳುತ್ತಾರೆ. ಆದರೆ ವ್ಯವಸಾಯ ಮತ್ತು ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಯ ಮೇಲೆ ಬಂಡವಾಳವನ್ನು ಹಾಕಿದರೆ 70 ಪರ್ಸೆಂಟ್ ರಿಟರ್ನ್ ಬರುತ್ತದೆ ಎಂದು ಹೇಳುತ್ತಾರೆ. ಆದ್ದರಿಂದ ದೊಡ್ಡ ದೊಡ್ಡ ಕೈಗಾರಿಕೆ ಮೇಲೆ ಹಣವನ್ನು ಇನ್‌ವೆಸ್ಟ್ ಮಾಡುವುದನ್ನು ವ್ಯವಸಾಯದ ಮೇಲೆ ಇನ್‌ವೆಸ್ಟ್ ಮಾಡಿದರೆ ಒಳ್ಳೆಯದು.

(ಶ್ರೀ ಅಣ್ಣಾರಾವ್ ಗಣಮುಖ)

ಇನ್ನೂ ಫೇರ್‌ಪ್ರೈಜ್ ಫಿಕ್ಸ್ ಮಾಡಬೇಕು ಎಂದರೆ ಹೇಗೆ ಫಿಕ್ಸ್ ಮಾಡುತ್ತಾರೆ? ಈಗ ಒಂದು ಕ್ವಿಂಟರ್ ಅಕ್ಕಿಯನ್ನು 70-80 ರೂಪಾಯಿಗಳಿಗೆ ಮಾರಾಟ ಮಾಡುತ್ತಿದ್ದರೆ ಅದನ್ನು 50-60 ರೂಪಾಯಿಗಳಿಗೆ ಮಾರಾಟ ಮಾಡಬೇಕೆಂದರೆ ಹೇಗಾಗುತ್ತದೆ? ಸ್ಕೆಂಟಿಫಿಕ್ ಆಗಿ ರೇಟುಗಳನ್ನು ಫಿಕ್ಸ್ ಮಾಡಬೇಕು ಎಂದು ಹೇಳಿದರೆ ಅದು ಅಷ್ಟು ಸುಲಭವಲ್ಲ. ಈಗ ಯಾವುದಾದರೂ ಒಂದು ರೇಟನ್ನು ಆಹಾರ ಧಾನ್ಯಗಳಿಗೆ ಸರ್ಕಾರವವರು ಫಿಕ್ಸ್ ಮಾಡುವುದಾದರೆ, ಆಗ ರೈತನಿಗೆ ತೊಂದರೆ ಆಗುತ್ತದೆ. ಏತಕ್ಕೆಂದರೆ ಈಗ ಒಕ್ಕಲುತನದ ಖರ್ಚು ಹೆಚ್ಚಾಗುತ್ತಿದೆ. ಅದಕ್ಕೋಸ್ಕರ ಮತ್ತೊಂದು ಪ್ರಾಬ್ಲಮ್ ಉದ್ಭವಿಸುತ್ತದೆ. ಈ ದೃಷ್ಟಿಯಿಂದ ಹೆಚ್ಚಿಗೆ ಉತ್ಪಾದನೆಯಾಗಬೇಕಾದರೆ ನಾವು ಒಕ್ಕಲುತನಕ್ಕೆ ಹೆಚ್ಚು ಗಮನವನ್ನು ಕೊಟ್ಟು ಅದಕ್ಕೆ ಹೆಚ್ಚು ಹಣವನ್ನು ಖರ್ಚುಮಾಡಬೇಕಾಗುತ್ತದೆ. ಈಗ ದೇಶದಲ್ಲಿ ಅಭಿವೃದ್ಧಿ ಕಾರ್ಯಗಳಿಗೋಸ್ಕರ ಸರ್ಕಾರದವರು ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ. ಆದರೆ ಅದರಲ್ಲಿ ಒಕ್ಕಲಿಗರಿಗೆ ಹೆಚ್ಚು ಲಾಭವಾಗುತ್ತದೆ ಎಂದು ಅನಿಸುವುದಿಲ್ಲ. ಈಗ ಒಕ್ಕಲುತನದಲ್ಲಿ ಸಾಕಷ್ಟು ಪ್ರಗತಿಯಾಗಿಲ್ಲ ಎಂಬುದನ್ನು ಸರ್ಕಾರದವರೇ ಒಪ್ಪಿಕೊಳ್ಳುತ್ತಾರೆ. ಆದ್ದರಿಂದ ನಮ್ಮ ದೇಶದಲ್ಲಿ ಎಷ್ಟು ಉತ್ಪಾದನೆಯಾಗಬೇಕಾಗಿತ್ತೋ ಅಷ್ಟು ಉತ್ಪಾದನೆ ಆಗಿಲ್ಲ. ಅದರ ದೆಸೆಯಿಂದ ನಾವು ಅದಕ್ಕೋಸ್ಕರ ಅಮೆರಿಕಾ ದೇಶಕ್ಕೆ ಹೋಗಬೇಕಾಗುತ್ತದೆ. ಈಗ ಕೇಂದ್ರ ಸರ್ಕಾರದವರು ಹೊರಗಡೆಯಿಂದ 17 ಲಕ್ಷ ಟನ್ ಗೋಧಿಯನ್ನು ನಮ್ಮ ದೇಶಕ್ಕೆ ತರಬೇಕೆಂದು ಒಂದು ಯೋಜನೆಯನ್ನು ಹಾಕಿಕೊಂಡಿದ್ದಾರೆ. 17 ಲಕ್ಷ ಟನ್ ಗೋಧಿಯನ್ನು ಬೇರೆ ದೇಶದಿಂದ ನಮ್ಮ ದೇಶಕ್ಕೆ ತಂದರೆ ನಮ್ಮ ದೇಶದಲ್ಲಿ ಬೆಳೆಯುತಕ್ಕ ಗೋಧಿ ಹಾಗೆಯೇ ಉಳಿಯುತ್ತದೆ. ಅದರಿಂದ ಗೋಧಿಯನ್ನು ಬೆಳೆಯುತಕ್ಕವರಿಗೆ ತೊಂದರೆ ಆಗುತ್ತದೆ. ಆದ್ದರಿಂದ ಕೇಂದ್ರ ಸರ್ಕಾರದ ಮೇಲೆ ನಾವೆಲ್ಲರೂ ಒತ್ತಾಯವನ್ನು ತಂದು ನಮ್ಮ ಮುಂದಿನ ಯೋಜನೆ ಏನಿದೆ, ವ್ಯವಸಾಯಕ್ಕೆ ಅನುಕೂಲವಾಗುವಂತೆ ಮತ್ತು ಬೆಳೆಗಳು ಹೆಚ್ಚಾಗುವಂತೆ ಪ್ಲಾನ್ ಹಾಕಿ ಆ ಪ್ರಕಾರವಾಗಿ ವಿಚಾರ ಮಾಡಿದರೆ ಆಹಾರ ಧಾನ್ಯಗಳ ಬೆಲೆ ಕಡಮೆಯಾಗುತ್ತದೆ ಇಲ್ಲದೆ ಹೋದರೆ ಇಲ್ಲ ಎಂದು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಭಾನ್ಕರಶೆಟ್ಟಿ (ಕಾಪು).—ಸ್ವಾಮಿ, ಈಗ ನಾವು ನಮ್ಮ ರಾಜ್ಯದ ಅತಿ ಗಂಭೀರವಾದ ಪ್ರಶ್ನೆಯನ್ನು ಚರ್ಚಿಸುತ್ತಿದ್ದೇವೆ. ಈ ವಿಷಯದಲ್ಲಿ ನಾನಾದರೂ ಸರ್ಕಾರದ ವಿಫಲತೆಯನ್ನು ಈ ಸಂದರ್ಭದಲ್ಲಿ ಹೇಳದೆ ಉಪಾಯವಿಲ್ಲ.

ಸ್ವಾಮಿ, ಕಾಂಗ್ರೆಸ್ ಸರ್ಕಾರ 17 ವರ್ಷಗಳಿಂದ ಅವಿರತವಾಗಿ ಈ ಗಾದಿಯಲ್ಲಿ ಮಂಡಿಸಿದ್ದರೂ ನಮ್ಮ ಕೋಟ್ಯಾಂತರ ಜನತೆಯು ಬೇರೆಯವರ ಅನ್ನಕ್ಕೆ ಕೈ ಒಡ್ಡುವ ಗತಿ ಇನ್ನೂ ತಪ್ಪಲಿಲ್ಲ. ಇದು ಒಂದು ದುರ್ದೈವವಾದ ವಿಷಯ. ಸರ್ಕಾರ ತನ್ನ ರೆಕ್ಕಪತ್ರಗಳನ್ನು ಸಭೆಯ ಮುಂದೆ ಮಂಡಿಸುವಾಗ, ಕೋಟ್ಯಾಂತರ ರೂಪಾಯಿಗಳನ್ನು, ಈ ದೇಶದ ಬಡ ರೈತರಿಗಾಗಿ ಖರ್ಚು ಮಾಡುತ್ತೇವೆ, ರೈತರು ನಮ್ಮ ಬೆನ್ನುಮೂಳೆ ಎಂದು ಬೆನ್ನು ಚಪ್ಪರಿಸಿಕೊಳ್ಳುತ್ತಿದ್ದಾರೆ. ಆದರೆ ಅವನ ಸ್ಥಿತಿ ಹಾಗೆಯೇ ಇದೆ. ಈ ಹಣ ರೈತನಿಗೆ ಮುಟ್ಟಿದೆಯೋ ಇಲ್ಲವೋ, ರೈತರಿಗಾಗಿ ಏನಾದರೂ ಕೆಲಸ ವಾಗಿದೆಯೋ ಎಂದು ಪರಿಶೀಲನೆ ಮಾಡುವುದಿಲ್ಲ. ನಾನಾದರೂ ಹೇಳುತ್ತೇನೆ, ನಿಜವಾಗಿಯೂ ರೈತರಿಗಾಗಿ ಎಂದು ಇಡುವ ಹಣ ಅವರಲ್ಲಿಗೆ ಸರಿಯಾಗಿ ಹೋಗದೆ ಬೇರೆ ಕಂಟ್ರಾಕ್ಟುದಾರರಿಗೋ ರೈಸೆನ್ಸ್‌ದಾರರಿಗೋ ಹೋಗಿ ರೈತರ ಪಾಡು ಅಧೋಗತಿಗೆ ಇಳಿಯುತ್ತದೆ.

ಸ್ವಾಮಿ, ಹೋದ ಸಲ ಬಜೆಟ್ ಅಧಿವೇಶನದಲ್ಲಿ ಒದಗಿಸಿದ ಅಂಕಿ ಅಂಶಗಳನ್ನು ನೋಡುವಾಗ ನಮ್ಮ ಮೈಸೂರು ರಾಜ್ಯದಲ್ಲಿ 1962-63ನೇ ಸಾಲಿಗೆ ಆಹಾರಧಾನ್ಯಗಳ ಉತ್ಪಾದನೆ ಬಹಳ ಹೆಚ್ಚಾಗಿದೆ ಎಂದು ಕಂಡುಬಂತು. ಆದರೆ ಬರಗಾಲ ಇಷ್ಟು ಬೇಗ ಏತಕ್ಕಾಗಿ ಬಂತು ಎಂದು ನಾವು ಆಲೋಚನೆ ಮಾಡಬೇಕು. ಅಧಿಕ ಲಾಭಬಡುಕರಿಂದಾಗಿ, ವ್ಯಾಪಾರಸ್ಥರಿಂದಾಗಿ ಈ ಪರಿಸ್ಥಿತಿ ಉದ್ಭವಿಸಿದೆ ಮಾತ್ರವಲ್ಲದೆ ದಕ್ಷತೆ ಇಲ್ಲದೆ ಆಡಳಿತವನ್ನು ನಡೆಸುವುದರಿಂದ ಈ ಪರಿಸ್ಥಿತಿ ಉಂಟಾಗಿದೆ ಎಂದು ನಾನು ಕೆಲವು ವಿಷಯಗಳನ್ನು ಹಿಂದಿನಿಂದ ಹೇಳಿ ತಮಗೆ ವಿಚಾರಪೂರ್ಣವಾಗಿ ತಿಳಿಸುತ್ತೇನೆ. 1956ನೆ ಇಸವಿಯಲ್ಲಿ ನಾವು ದಕ್ಷಿಣವಲಯ ಸಮಿತಿಯನ್ನು ಮಾಡಿ ಅದರಲ್ಲಿ ಸೇರಿದ್ದೇವೆ. ಅದರಲ್ಲಿ ಸೇರಿದಂದಿನಿಂದ 1963ನೆಯ ನವಂಬರ್ ತನಕವೂ ಆಹಾರ ಸಾಮಗ್ರಿಗಳು ಟ್ಯಾಕ್ಸ್ ನಿರ್ಬಂಧವಿಲ್ಲದೆ, ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಸರಬರಾಜಾಗುತ್ತಿದ್ದುವು. 1963ನೆ ನವಂಬರ್ ತಿಂಗಳಿನಲ್ಲಿ ಆಂಧ್ರ ಸರ್ಕಾರದವರು ಅಲ್ಲಿರದ ಹೊರಗೆ ಹೋಗುವ ಅಕ್ಕಿಗೆ ಟ್ಯಾಕ್ಸ್ ವಸೂಲು ಮಾಡಿದರು. ಉತ್ತರಪ್ರದೇಶದವರು ಅಲ್ಲಿಂದ ಹೊರಗೆ ಹೋಗುವ ತೊಗರಿಬೇಳೆಗೆ ನಿರ್ಬಂಧ ಹಾಕಿದರು.

ಮಧ್ಯಪ್ರದೇಶದವರು ಅಲ್ಲಿಂದ ಬರುವ ತೊಗರಿ ಮೇಲೆ ನಿರ್ಬಂಧ ಹಾಕಿದ್ದಾರೆ. ಮಹಾರಾಷ್ಟ್ರದಿಂದ ಬರುವ ಗೋಧಿ, ಜೋಳ, ಈ ದವನಧಾನ್ಯಗಳಿಗೆ ತಡೆ ಹಾಕಿದ್ದಾರೆ. ನಾವು ಏನು ಮಾಡಿದ್ದೇವೆಂದರೆ ನಮ್ಮ ರಾಜ್ಯದಲ್ಲಿರುವ ಅಕ್ಕಿಯನ್ನು ನಮ್ಮ ವ್ಯಾಪಾರಸ್ಥರು ಕೇರಳಕ್ಕೆ ಸಾಗಿಸುತ್ತಿದ್ದಾರೆ. ಅಭಾವದ ಪ್ರಶ್ನೆ ಇಲ್ಲ. ಉದ್ಭವಿಸುವವರೆಗೆ, ಬರಗಾಲ ಪರಿಸ್ಥಿತಿಯ ಸೂಚನೆ ಇಲ್ಲ ಕೊಡುವವರಿಗೆ ಈ ವಿಷಯವನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಳ್ಳಲೇ ಇಲ್ಲ. ಇದರಿಂದಾಗಿ ನಮ್ಮ ಪರಿಸ್ಥಿತಿ ಈ ರೀತಿಯಾಗಿದೆ. ಸರ್ಕಾರದವರು ಇನ್ನಾದರೂ ಮುಂದಕ್ಕಾದರೂ ಈ ತರಹೆ ಆಗದ ಹಾಗೆ ನೋಡಿಕೊಳ್ಳಬೇಕು. ಈಗಿನ ಪರಿಸ್ಥಿತಿ ಒದಗುವುದಕ್ಕಿಂತ ಮುಂಚೆಯೇ ನಮ್ಮ ರಾಜ್ಯದಿಂದ ಹೊರಗೆ ಹೋಗುವ ಅಕ್ಕಿಯ ಮೇಲೆ ನಿರ್ಬಂಧವನ್ನು ಹಾಕಿದ್ದರೆ, ದೂರಾಲೋಚನೆಯಿಂದ ವರ್ತಿಸಿದ್ದರೆ ಈ ಪರಿಸ್ಥಿತಿ ಒದಗುತ್ತಿರಲಿಲ್ಲ.

ನಾನು ಈ ವಿಷಯದಲ್ಲಿ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮ ಜಿಲ್ಲೆಯಲ್ಲಿ ಈ ವರ್ಷ ಮುಂಗಾರು ಮಳೆಯ ಅಭಾವದಿಂದ ನಾವು ದುಸ್ಥಿತಿಗೆ ಈಡಾಗಿದ್ದೇವೆ ಈತನಕ ಮುಂಗಾರು ಮಳೆ ಸರಿಯಾಗಿ ಬಾರದೆ ಇದ್ದು ವ್ಯವಸಾಯ ಆಗಿಲ್ಲ. ನಮ್ಮಲ್ಲಿ ಈ ವ್ಯವಸಾಯ ಒಂದು ತಿಂಗಳ ಹಿಂದೆಯೇ ಆಗಬೇಕಾಗಿತ್ತು. ಮುಂಗಾರು ಮಳೆಗಳು ಈ ವರ್ಷ ಒಂದು ತಿಂಗಳು ತಡವಾಗಿ ಬಂದು ಬರುವ ಮಳೆ ಸರಿಯಾಗಿ ಬೀಳದೆ ಕಾಲುಭಾಗ ಕೂಡ ವ್ಯವಸಾಯವಾಗಿಲ್ಲ ಎಂದು ಕಾಗದಗಳು ಇವೊತ್ತು ನನಗೆ ಬಂದಿವೆ. ಇನ್ನು ಮುಂದಕ್ಕೆ ವ್ಯವಸಾಯವಾಗುವ ರೀತಿಯಲ್ಲಿಲ್ಲ. ರೈತರು ಈಗಾಗಲೇ ಏನು ಬಿತ್ತನೆ ಮಾಡಿದ್ದಾರೆಯೋ ಅದೆಲ್ಲ ಹೋಗಿಬಿಟ್ಟಿದೆ. ಇನ್ನು ಹೊಸ ಬಿತ್ತನೆಗೆ ಸರ್ಕಾರದ ಕಡೆ ನೋಡುವಾಗ ಹೊಸ ಬಿತ್ತನೆ ಬೀಜ ಬಿ.ಡಿ.ಓ. ಆಫೀಸಿನಲ್ಲಿ ಮತ್ತು ಇತರ ಸಹಕಾರ ಸಂಘಗಳಲ್ಲಿ ಇಲ್ಲ ಎಂದು ತಿಳಿದುಬಂದಿದೆ. ಆದ್ದರಿಂದ ಒಂದು ವೇಳೆ ಸರಿಯಾಗಿ ಮಳೆಯಾದರೂ ನಾವು ವ್ಯವಸಾಯ ಮಾಡುವ ಸ್ಥಿತಿಯಲ್ಲಿಲ್ಲ ಎಂದು ಅವರು ಬರೆದಿದ್ದಾರೆ.

ದಕ್ಷಿಣ ಕನ್ನಡಜಿಲ್ಲೆಯಲ್ಲಿ ನೀರಾವರಿ ಅನುಕೂಲತೆ ಬಹಳ ಜಾಸ್ತಿ ಇದೆ. ಅಲ್ಲಿ ಏನೇನೂ ನೀರಾವರಿಯಾಗಿಲ್ಲ. ಇದರ ಜೊತೆಗೆ ಅತಿವೃಷ್ಟಿಯ ದೆಸೆಯಿಂದ ಭೂಮಿಯು ಕೊರೆಯುವಿಕೆ ಹೆಚ್ಚಾಗಿ ಅದರಿಂದ ಬರುವ ನಷ್ಟವನ್ನೂ ಸಹ ನಮ್ಮ ರೈತರು ಪ್ರತಿ ವರ್ಷವೂ ಅನುಭವಿಸಿಕೊಂಡು ಬರುತ್ತಿದ್ದಾರೆ. ಭೂಮಿಯ ಕೊರೆಯುವಿಕೆಯನ್ನು ತಡೆಗಟ್ಟಲು ನಮ್ಮ ಮೈಸೂರು ಸರ್ಕಾರ ಯಾವ ವಿಶೇಷ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಹೋದ ವರ್ಷ ಕೇಂದ್ರಸರ್ಕಾರ ಇದಕ್ಕಾಗಿ 60 ಕೋಟಿ ರೂಪಾಯಿಗಳನ್ನು ಇಟ್ಟಿತ್ತು. ಆದರೆ ನಮ್ಮ ಸರ್ಕಾರ ಈ ಹಣವನ್ನು ಪಡೆಯುವ ಗೋಜಿಗೆ ಹೋಗಲಿಲ್ಲ. ಭೂಮಿಯು ಕೊರೆಯುತ್ತಿದೆ ಎನ್ನುವ ವಿಷಯ ಮೈಸೂರು ಸರ್ಕಾರದ ತಿಳುವಳಿಕೆಗೆ ಈ ತನಕ ಬರಲಿಲ್ಲ. ನಮ್ಮ ಪಶ್ಚಿಮ ಕರಾವಳಿಯಲ್ಲಿ ಭೂಮಿಯ ಕೊರೆಯುವಿಕೆಯಲ್ಲದೆ ಉಪ್ಪು ನೀರು ಮೇಲೇರಿ ಬರುವುದರಿಂದ ರೈತರಿಗೆ ಬೆಳೆಗಳನ್ನು ತೆಗೆಯುವುದಕ್ಕೆ ಆಗುವುದಿಲ್ಲ. ಉಪ್ಪು ನೀರು ಮೇಲೇರಿ ಬಂದು ಬೆಳೆಗಳು ನಷ್ಟವಾಗುತ್ತಿವೆ ಸಾಲ್ಟ್‌ವಾಟರ್ ಎಕ್ಸ್‌ಕ್ಲೂಷನ್ ಡ್ಯಾಂ ಎಂದು ಈಗ ಕೆಲವು ಸೇತುವೆಗಳನ್ನು ಕಟ್ಟುತ್ತಿದ್ದಾರೆ. ಇದರಿಂದ ನೀರು ಮೇಲೇರಿ ಬರುವುದು ತಪ್ಪಿದರೂ ಅತಿವೃಷ್ಟಿಯ ದೆಸೆಯಿಂದ ಭೂಮಿಯಲ್ಲಾ ಕೊಚ್ಚಿಹೋಗುತ್ತದೆ. ಆಪಾಗ ನೆರೆ ನಿಯಂತ್ರಣಕ್ಕಾಗಿ ಕೊಡುವ ಹಣವನ್ನು ನಮ್ಮ ಕಡೆ ಭೂಮಿ ಕೊರೆಯುವಿಕೆಯನ್ನು ತಡೆಗಟ್ಟಲು ಉಪಯೋಗಿಸಬೇಕು. ಕೆಲವು ದೊಡ್ಡ ದೊಡ್ಡ ನದಿಗಳಲ್ಲಿ ಸಿಲ್ಟ್ ತುಂಬಿದೆ. ಆ ಸಿಲ್ಟನ್ನು ತೆಗೆಸುವ ಬಗ್ಗೆ ದೀರ್ಘವಾಗಿ ಪರಿಶೀಲಿಸಿ ಅದಕ್ಕೆ ಬೇಕಾದ ಕಾರ್ಯಕ್ರಮಗಳನ್ನು ಕೂಡಲೇ ತೆಗೆದುಕೊಳ್ಳಬೇಕು. ಇದನ್ನು ಅನೇಕಸಲ ಸರ್ಕಾರದ ಗಮನಕ್ಕೂ ತಂದಿದ್ದೇನೆ. ಆದರೆ ಫಲಕಾರಿಯಾಗಿಲ್ಲ.

ಸ್ವಾಮಿ, ಈ ವರ್ಷ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಈ ರೀತಿಯ ಒಂದು ಭೀಕರವಾದ ಮತ್ತು ಹಿಂದಿನ ವರ್ಷಗಳಲ್ಲಿ ನಾವು ಕಾಣದಿದ್ದಂತಹ ಒಂದು ಬರಗಾಲ ಬಂದಿದೆ. ಈ ವಿಷಯವನ್ನು ಸರಕಾರ ಆಳವಾಗಿ ಆಲೋಚನೆ ಮಾಡಿ ಸರಕಾರಿಯಂತ್ರದ ಮೂಲಕ ವರದಿಗಳನ್ನು ತರಿಸಿ, ಇಂದಿನ ವರ್ಷಗಳಲ್ಲಿ ನಮ್ಮ ಜಿಲ್ಲೆಯಲ್ಲಿ ಹಾಕಿರುವ ಸರ್‌ಚಾರ್ಜನ್ನು ವಜಾ ಮಾಡಬೇಕು, ಈ ನಲ ವಸೂಲು ಮಾಡಬಾರದೆಂದು ಅತಿ ವಿನಯದಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಷಯವೇನೆಂದರೆ, ಎಲ್ಲಿ ನೀರಾವರಿ ಜಾಸ್ತಿಯಾಗಿದೆ ಎಂಬುದನ್ನು ಪರಿಷ್ಕೃತ ಕಂದಾಯ ಹಾಕುವಾಗ ನೋಡಬೇಕು.....

ಶ್ರೀ ಎಂ. ವಿ. ಕೃಷ್ಣಪ್ಪ.—ಕೋರಾರದಲ್ಲಿ ಮಿಂಟ್ ಆಗುತ್ತದೆ, ಹಣವನ್ನು ಅಲ್ಲಿಂದ ಬೇಕಾದಷ್ಟು ತೆಗೆದು ಕೊಳ್ಳಬಹುದೆಂದು; ಯಾವ ಕಂದಾಯವನ್ನೂ ವಸೂಲು ಮಾಡಬಾರದೆಂದು ಮಾನ್ಯ ಸದಸ್ಯರ ಅಭಿಪ್ರಾಯವೆ?

ಶ್ರೀ ಬಿ. ಭಾಸ್ಕರಶೆಟ್ಟಿ.—ತಾವು ಕೋಟ್ಯಾಂತರ ರೂಪಾಯಿ ಖರ್ಚು ಮಾಡುತ್ತಿದ್ದೀರಿ. ಈ ದೇಶದಲ್ಲಿರುವ ಕೋಟ್ಯಾಂತರ ಜನರನ್ನು ಹೊಚ್ಚಿಗೆ ಹಿಟ್ಟಿಲ್ಲದ ಕುಚೇಲರನ್ನಾಗಿ ಮಾಡಿ ತಮ್ಮ ಕೆಲವೇ ಹಿಂಬಾಲಕರನ್ನು ಕುಬೇರರನ್ನಾಗಿ ನಿರ್ಮಿಸಿ ತಾವು 27 ಜನ ಕುಂಭಕರ್ಣರು ರಾಜ್ಯ ಭಾರ ಮಾಡುತ್ತಿದ್ದೀರೆಂದು ನಾನು ಹೇಳಬೇಕಾಗುತ್ತದೆ. ಜನರ ವಾಸ್ತವ ಸ್ಥಿತಿಯ ಅರಿವು ಇನ್ನೂ ತಮಗಾಗಿಲ್ಲ.

ಅಂತೂ ಜನತೆಯ ಪರವಾಗಿ ವಿಷಯವನ್ನು ನಭೆಯ ಮುಂದಿಟ್ಟಿದ್ದೇನೆ. ಪರಿಷ್ಕೃತ ಕಂದಾಯವನ್ನು ಹಾಕುವಾಗ ಈ ವಿಷಯವನ್ನು ಗಮನಿಸಬೇಕು. ನಮ್ಮಲ್ಲಿ ನೀರಾವರಿ ಕೆಲಸಗಳೇನೂ ಆಗಿಲ್ಲ. ನಮ್ಮಲ್ಲಿ ವ್ಯಾಪಾರದ ಸ್ಥಳಗಳಿವೆ. ಇವುಗಳ ಅರಿವಿಲ್ಲದೆ ಒಂದಕ್ಕೆ ಮೂರುಪಾಲು ಭೂಕಂದಾಯವನ್ನು ಏರಿಸಬೇಕೆಂದಿದ್ದಾರೆ. ಆಂತೂ ಪರಿಷ್ಕೃತ ಭೂಕಂದಾಯವನ್ನು ವಿಧಿಸುವಾಗ, ದಕ್ಷಿಣಕನ್ನಡ ಜಿಲ್ಲೆಯವರಿಗೆ, ಅಲ್ಲಿನ ರೈತರಿಗೆ ವ್ಯವಸಾಯದಿಂದ ಏನೂ ಲಾಭ ಸಿಕ್ಕುವುದಿಲ್ಲವೆಂಬುದನ್ನು ಪರಿಗಣಿಸಿ ನೋಡಬೇಕು. ಈ ವಿಷಯವನ್ನು ಆಳವಾಗಿ ಆಲೋಚನೆ ಮಾಡಿ ನಮ್ಮ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಕಂದಾಯವನ್ನು ನಿಗದಿ ಮಾಡಬೇಕು.

ಇನ್ನು ನಮ್ಮ ಜಿಲ್ಲೆಯಲ್ಲಿ ಇಡೀ ರಾಜ್ಯದಲ್ಲಿ ಬೆಳೆಯುವ ಬದರಲ್ಲಿ ಒಂದು ಅಂಶದಷ್ಟು ಬತ್ತ ಬೆಳೆಯುತ್ತದೆ. ಆದರೂ ಈ ಬತ್ತದ ಬೆಳೆಯ ವಿಷಯವನ್ನು ತೀವ್ರವಾಗಿ ಆಲೋಚನೆ ಮಾಡಿಲ್ಲ. ತೀವ್ರತರವಾದ ಬತ್ತದ ಬೆಳೆಯ ಯೋಜನೆ ಜಾರಿಗೆ ತಂದಿದ್ದಾರೆ. ಇದರಲ್ಲಿ ಎರಡೂವರೆ ಲಕ್ಷರೂಪಾಯಿ ಖರ್ಚು ಮಾಡುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ನಮ್ಮ ಮಂಗಳೂರಿಗೆ ಬಂದಿದ್ದಾಗ ಈ ತೀವ್ರ ವ್ಯವಸಾಯ ಅಥವಾ ಇಂಟೆನ್‌ಸಿವ್ ಅಗ್ರಿಕಲ್ಚರ್ ಯೋಜನೆಯನ್ನು ಪ್ರಾರಂಭ ಮಾಡಿದ್ದಾರೆ.....

**Mr. SPEAKER.**—I think it was postponed.

ಶ್ರೀ ಬಿ. ಭಾಸ್ಕರಶೆಟ್ಟಿ.—ಒಂದು ವೇಳೆ ಪ್ರಾರಂಭವಾಗದೇಯಿದ್ದರೆ, ಎರಡೂವರೆ ಲಕ್ಷರೂಪಾಯಿಗಳನ್ನು ಎಕ್ಸ್‌ಟೆನ್‌ಷನ್ ಅಧಿಕಾರಿಗಳಿಗೆ ಸಂಬಳ ಕೊಟ್ಟು ತೀವ್ರ ಬತ್ತದ ಬೆಳೆ ಯೋಜನೆಯನ್ನು ಜಾರಿಗೆ ತಂದಿದ್ದೇವೆಂದು ಜನತೆಯಲ್ಲಿ ಹೇಳುವ ಬದಲು, ಒಂದೆರಡು ಕೋಟ ರೂಪಾಯಿಗಳಷ್ಟು ಸಹಾಯವನ್ನು ಕೊಟ್ಟು ಅಥವಾ ಖರ್ಚು ಮಾಡಿ ಹೆಚ್ಚು ಫಲ ಬರುವಂತೆ, ಬತ್ತದ ಬೆಳೆಯನ್ನು ಎರಡರಷ್ಟು ಬರುವಂತೆ ಏರ್ಪಾಡು ಮಾಡಿದರೆ ಒಳ್ಳೆಯದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದು ಸಾಧ್ಯ. ಬತ್ತದ ವ್ಯವಸಾಯದ ವಿಷಯವನ್ನು ತೀವ್ರವಾಗಿ ಆಲೋಚನೆ ಮಾಡಿದರೆ ಅಲ್ಲಿ ಈಗ ತೆಗೆಯುವ ಉತ್ಪತ್ತಿಯನ್ನು ಎರಡರಷ್ಟು ಮಾಡಿ ತೆಗೆಯಬಹುದು. ಒಂದೊಂದು ಗದ್ದೆಯಲ್ಲಿ ಮೂರು ಬೆಳೆಯಾಗುತ್ತದೆ. ಇನ್ನು ಕೆಲವು ನೀರಾವರಿ ಸೌಕರ್ಯ ಅಲ್ಲಿ ಬಂದರೆ ಮತ್ತು ಗೊಬ್ಬರ ರೈತರಿಗೆ ಸರಿಯಾಗಿ ಸಿಕ್ಕಿದರೆ ಬಾವಿಗಳನ್ನು ತೋಡಿಸಿ ಪಂಪುಗಳನ್ನು ಹಾಕಿಸಿದರೆ, ಖಂಡಿತವಾಗಿ ಹೇಳುತ್ತೇನೆ, ಅಲ್ಲಿನ ಬೆಳೆ ವರ್ಷಕ್ಕೆ ನಮಪಾಲು ಹೆಚ್ಚಾಗುತ್ತದೆ. ಈ ಬಗ್ಗೆ ಆದಷ್ಟು ಗಮನ ವನ್ನಿಟ್ಟುಕೊಂಡು ಕೆಲಸವನ್ನು ಮಾಡಬೇಕು, ಬರಿಯ ಕಾಗದಪತ್ರದಿಂದ ಮಾಡುವುದಿಲ್ಲ. ಜಾಗ್ರತೆ ಕಾರ್ಯರೂಪದಲ್ಲಿ ಮಾಡಿನಬೇಕೆಂದು ಹೇಳುತ್ತೇನೆ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ (ತುಮಕೂರು).—ಮಾನ್ಯ ಸಭಾಧ್ಯಕ್ಷರೆ, ಈಗ ನಮ್ಮ ರಾಜ್ಯದಲ್ಲಿ ಉಂಟಾಗಿರುವ ಅಭಾವ ಪರಿಸ್ಥಿತಿಯ ಬಗ್ಗೆ ಮಾತನಾಡುತ್ತಾ ತುಮಕೂರು ಜಿಲ್ಲೆ ಅಭಾವ ಪರಿಸ್ಥಿತಿಗೆ ಒಳಗಾಗಿರುವುದಿಲ್ಲವೆಂದು ಪತ್ರಿಕೆಗಳಲ್ಲಿ ಬಂದಿದೆ ಎಂಬುದನ್ನು ಕೇಳಿ ನಮ್ಮ ಜಿಲ್ಲೆಯಲ್ಲಿ ಅರ್ಧ ಜೀವ ಹೋಗಿರುವ ಜನರಿಗೆ ಪೂರ್ತಿ ಜೀವ ಹೋದಂತಾಗಿದೆ. ಈ ರೀತಿ ಹೇಳಿಕೆಯನ್ನು ಪತ್ರಿಕೆಗಳಿಗೆ ಯಾರು ನೀಡಿದ್ದಾರೋ ಗೊತ್ತಿಲ್ಲ. ಸ್ವಾಮಿ, ಇದುವರೆಗೆ ತುಮಕೂರು ಜಿಲ್ಲೆಯಲ್ಲಿ ಅನೇಕ ಭಾಗಗಳಲ್ಲಿ ಉಳುಮೆ ಕೂಡ ಮಾಡಿಲ್ಲ, ಉಳುಮೆ ಮಾಡುವಷ್ಟು ಮಳೆ ಕೂಡ ಆಗಿಲ್ಲ. ಈಗಾಗಲೇ ಬಿತ್ತನೆ ಕೂಡ ಮುಗಿಸಬೇಕಾಗಿತ್ತು. ಹೀಗಿರುವಾಗ ಇನ್ನೂ ಬಿತ್ತನೆ ಉಳುಮೆ ಕೂಡ ಆಗಿಲ್ಲವೆಂದು ಹೇಳಬೇಕಾದರೆ ಈ ಭಾಗಕ್ಕೆ ಅಭಾವ ತಲೆದೋರಿಯೇ ಇಲ್ಲವೆ ಎಂಬುದನ್ನು ಸರಕಾರದವರು ಯೋಚನೆ ಮಾಡಬೇಕಾಗಿದೆ. ರೈತ ಹೊಲ ಗದ್ದೆಗಳಲ್ಲಿ ಹಗಲಿರುಳೂ ದುಡಿಯಬೇಕಾದ ಈ ಸಮಯದಲ್ಲಿ ಮುಗಿಲನ್ನು ನೋಡಿಕೊಂಡು ಕೈ ಕಟ್ಟಿಕೊಂಡು ಕುಳಿತಿದ್ದಾನೆ. ಅಲ್ಲಿ ದನಕರುಗಳಿಗೆ ಮೇವಿಲ್ಲದೆ ಮರಗಳ ಎಲೆಗಳನ್ನು ಕಿತ್ತು ದನಗಳ ಮೇವಿಗಾಗಿ ಉಪಯೋಗ ಮಾಡುತ್ತಿದ್ದಾರೆ. ನಮ್ಮ ಜನರ ದುರದೃಷ್ಟವೋ ಏನೋ, ಹೋದ ವರ್ಷ ಕೂಡ ನಮಗೆ ಸರಿಯಾಗಿ ಮಳೆ ಬೆಳೆಗಳಾಗಿಲ್ಲ. ರೈತರಲ್ಲಿ ಆಹಾರಧಾನ್ಯ ಶೇಖರಣೆಯಿಲ್ಲ, ಕೂಲಿ ಮಾಡಲು ಕೆಲಸವಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಶ್ರೀಮತಿ ಭಾಗೀರಥಮ್ಮನವರು ಈ ವರದಿಯನ್ನು ನೋಡಿಲ್ಲವೆಂದು ಕಾಣುತ್ತದೆ; ಇದರಲ್ಲಿ ಅಲ್ಲಿ ಮಳೆ ಬಂದಿದೆ ಎಂದು ಹೇಳಿದ್ದಾರೆ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.–ಸ್ವಾಮಿ, ನಮ್ಮ ರಾಜ್ಯದಲ್ಲಿ ಶೇಕಡ 75 ಭಾಗದಷ್ಟು ವ್ಯವ ಸಾಯುಗಾರರಿದ್ದರೂ ಕೂಡ ಅಭಾವ ಪರಿಸ್ಥಿತಿಯನ್ನು ಆಗಾಗ ಎದುರಿಸಬೇಕೆಂದರೆ ಇದರಲ್ಲಿ ಏನು ಕುಂದಿದೆ, ಏನು ದೋಷವಿದೆ ಎಂಬುದನ್ನು ಸರಕಾರ ಗಮನಿಸಬೇಕು. ತುಮಕೂರು ಜಿಲ್ಲೆಯಲ್ಲಿ ಮಳೆಯಾಗಿದೆ ಎಂದು ತಿಳಿಸಿದವರು ಯಾರು? ಅಧಿಕಾರಿಗಳು ಕೆರೆ ಬಾವಿ ಗಳನ್ನು ನೋಡಿದ್ದಾರೆಯೇ, ಹಾಗೆ ನೋಡಿ ಈ ಅಭಿಪ್ರಾಯವನ್ನು ಕೊಟ್ಟಿದ್ದಾರೆಯೆ? ರೈತನ ಕಡೆ ತಮ್ಮ ದೃಷ್ಟಿಯನ್ನು ಹರಿಸಿದ್ದಾರೆಯೇ, ಸರಿಯಾಗಿ ಗಮನಿಸಿದ್ದಾರೆಯೇ? ಹೀಗೆ ಮಾಡಿದ್ದರೆ ತುಮಕೂರು ಜಿಲ್ಲೆಯಲ್ಲಿ ಮಳೆ ಆಗಿದೆಯೇ ಇಲ್ಲವೇ ಎಂಬುದು ಅವರಿಗೆ ಗೊತ್ತಾಗುತ್ತಿತ್ತು. ಎಲ್ಲಿಯೋ ತಾರು ರಸ್ತೆಯ ಮೇಲೆ ಬಿದ್ದ ಹನಿಯನ್ನು ನೋಡಿಕೊಂಡು ಅವರು ಹೀಗೆ ಹೇಳಿರಬಹುದು. ಇದನ್ನು ನೋಡಿ ಮಳೆ ಬಂದಿದೆ ಎಂದು ಅಧಿಕಾರಿಗಳು ಸರಕಾರಕ್ಕೆ ವರದಿ ಕಳುಹಿಸಿರಬಹುದು. ಪ್ರಜೆಗಳು ತಮ್ಮ ಪ್ರತಿನಿಧಿಗಳ ಮುಂದೆ ಹೇಳುವಷ್ಟು ಸುಲಭವಾಗಿ ಸರಕಾರದ ಅಧಿಕಾರಿಗಳ ಮುಂದೆ ಹೇಳುವುದಿಲ್ಲ. ಹೀಗಿರುವಾಗ, ಜನರ ಪ್ರತಿನಿಧಿಗಳಾದ ನಾವು ಹೇಳುವುದರ ನಿಜಾಂಶದ ಕಡೆ ಸರಕಾರ ಗಮನ ಕೊಡಬೇಕು. ತುಮಕೂರು ಜಿಲ್ಲೆಗೆ ಪರಿಹಾರ ವನ್ನೊದಗಿಸಬೇಕಾದುದು ಮುಖ್ಯ ಕರ್ತವ್ಯ. ಸ್ವಾಮಿ ಬರಗಾಲ ಬಂದಾಗ ಭಾವಿ ತೋಡಿಸುವುದಕ್ಕೆ ಬದಲು ಮುಂಚಿತವಾಗಿ ಕ್ರಮಗಳನ್ನು ತೆಗೆದುಕೊಳ್ಳುವುದು ಅಗತ್ಯ. ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಯೋಜನೆಗಳನ್ನು ಮಾಡಿದರೆ, ಲಕ್ಷಾಂತರ ಎಕರೆ ನೀರಾವರಿಯಾಗುತ್ತದೆ. ಇದಕ್ಕೆ ಹತ್ತಾರು ವರ್ಷ ಕಾಲ ಬೇಕಾಗುತ್ತದೆ. ಇದಕ್ಕೆ ಬದಲು ತಕ್ಷಣ ಪ್ರತಿಫಲ ಕೊಡುವ ಕೆಲಸಗಳಿಗೆ ಸಾವಿರಾರು ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿ ಅಲ್ಪ ಕಾಲದಲ್ಲಿ ಭೂಮಿಗೆ ನೀರಾವರಿ ಒದಗಿಸುವ ಯೋಜನೆ ಮಾಡಬೇಕು. ಸಣ್ಣಪುಟ್ಟ ಕೆರೆಗಳನ್ನು ಮತ್ತು ಪಿಕಪ್‌ಗಳನ್ನು ಕಟ್ಟುವುದು ಮತ್ತು ಶಿಥಿಲವಾಗಿರುವ ಕೆರೆಗಳನ್ನು ಜೀರ್ಣೋದ್ಧಾರ ಮಾಡುವುದು, ರಸ್ತೆ ಸೇತುವೆ ಗಳನ್ನು ಕಟ್ಟುವುದು ಮುಂತಾದ ಕೆಲಸಗಳನ್ನು ಕೈಗೊಳ್ಳುವುದರಿಂದ ಈ ಅಭಾವ ಪರಿಸ್ಥಿತಿ ಯನ್ನು ತಾತ್ಕಾಲಿಕವಾಗಿ ಯಾದರೂ ಸ್ವಲ್ಪಮಟ್ಟಿಗೆ ತಡೆಗಟ್ಟಬಹುದು.

6-00 P. M.

ರೈತರಿಗಾಗಿ ನೀರಾವರಿ ಬಾವಿಗಳಿಗೆ ಹೆಚ್ಚು ಹಣ ಒದಗಿಸಬೇಕು. ನೀರಾವರಿ ಬಾವಿಗಳಿಗಾಗಿ ಎಲ್ಲಿ ಸಾಧ್ಯವಿದೆಯೋ ಅಲ್ಲಿ ಇರಿಕ್ಕಿಸಿಟಿ ಮತ್ತು ಪಂಪುಸೆಂಟ್‌ಗಳನ್ನು ಒದಗಿಸಿ ರೈತರು ನೀರು ಪಡೆಯುವಂತೆ ಮಾಡಬೇಕು. ವಿದ್ಯುಚ್ಛಕ್ತಿ ಪೂರೈಕೆ ಇಲ್ಲದ ಪ್ರದೇಶದಲ್ಲಿ ಆಯಿಲ್ ಎಂಜಿನ್‌ಗಳನ್ನು ಕೊಟ್ಟು ರೈತರಿಗೆ ಸಹಾಯ ಮಾಡಬೇಕು. ನಮ್ಮ ತಾಲ್ಲೂಕಿನ ಮಟ್ಟಿಗೆ ಹೇಳುವುದಾದರೆ ನೀರಾವರಿ ಬಾವಿಗಳಿಗೆ ಸಾಲ ತೆಗೆದುಕೊಂಡಂಥ ರೈತರು ತೊಂದರೆಗೀಡಾಗಿದ್ದಾರೆ. ಈ ವಿಷಯ ವನ್ನು ಮುಖ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇವೆ. ಅನೇಕ ಬಾವಿಗಳಲ್ಲಿ ಬಂಡೆ ಸಿಕ್ಕಿ ಬಾವಿಯ ಕೆಲಸ ಪೂರ್ತಿಯಾಗಿಲ್ಲ. ಸರಕಾರದ ಸಾಲದ ಹಣದ ಜೊತೆಗೆ ರೈತರು ತಮ್ಮ ಮನೆ ಮಾರು ಮಾರಿ ಹಣ ತಂದು ಬಾವಿಯ ಕೆಲಸಕ್ಕೆ ಹಾಕಿದ್ದರೂ ಕೂಡ ಬಾವಿಯ ಕೆಲಸ ಪೂರೈಸಲು ಅನೇಕ ರೈತರಿಗೆ ಆಗಿಲ್ಲ. ಇಂಥ ಬಾವಿಯ ಕೆಲಸ ಪೂರ್ತಿ ಮಾಡಲು ರೈತರಿಗೆ ಅವಶ್ಯಕವಾಗಿರತಕ್ಕ Well-Boring Machine ಗಳನ್ನು ಒದಗಿಸುವುದರ ಮೂಲಕ ಸರಕಾರ ಹೆಚ್ಚಿನ ಸಹಾಯ ಮಾಡಬೇಕಾದುದು ಅಗತ್ಯ. ಮೂರು ನಾಲ್ಕು ವರ್ಷವಾಗಿದ್ದರೂ ಕೂಡ ಬಾವಿಯ ಕೆಲಸ ಪೂರ್ತಿಯಾಗಿಲ್ಲ. ಒಂದು ವರ್ಷದಲ್ಲಿ ಬಾವಿ ಕೆಲಸ ಪೂರೈಸದೇ ಇದ್ದರೆ ಅಂಥವರಿಗೆ ಹಣ ವಾಪಸ್ ಕೊಡಬೇಕೆಂದು ನೋಟೀಸ್ ಕೊಟ್ಟಿದ್ದಾರೆ. ರೈತ ಇದ್ದ ಜಮೀನನ್ನು ಸರಕಾರಕ್ಕೆ ಆಧಾರ ಮಾಡಿರುವುದರಿಂದ ಬೇರೆ ಸಾಲ ಅವನಿಗೆ ದೊರಕುವುದಿಲ್ಲ. ಸರಕಾರ ಇದನ್ನು ಆಲೋಚನೆ ಮಾಡಬೇಕು. ಅಂಥ ರೈತರ ಪರಿಸ್ಥಿತಿ ಏನಾಗಿದೆ ಎಂದರೆ ಬಾವಿಯಲ್ಲಿ ನೀರಿಲ್ಲ, ನೀರು ಇಲ್ಲದ್ದರಿಂದ ಬೆಳೆ ಬರುತ್ತಾ ಇರ್ಲಾ ಹಾಗೂ ಸಾಲ ತೀರಿಸುವುದಕ್ಕೆ ಆಗಿಲ್ಲ. ಹೀಗೆ ರೈತನ ಬಾಳು ಕಣ್ಣೀರಿನ ಬಾಳು ಆಗಿದೆ. ಇದಕ್ಕೆ ಸರಕಾರ ಇಂಥಾ ರೈತನಿಗೆ ಸಹಾನುಭೂತಿ ತೋರಿಸ ಬೇಕಾಗಿದೆ. ಆದಷ್ಟು ಜಾಗ್ರತೆ ರೈತನಿಗೆ Well Boring Machine ಒದಗಿಸಿಕೊಡುವ ಬಗ್ಗೆ ಗಮನ ಕೊಡಬೇಕೆಂದು ಹೇಳುತ್ತೇನೆ. ಭೂಮಿಯನ್ನು ಅಭಿವೃದ್ಧಿಪಡಿಸುವುದಕ್ಕೆ ತಕಾವಿ ಸಾಲ ರೈತನಿಗೆ ದೊರೆಯಬೇಕು. ಒಂದು ಸಾವಿರ ರೂಪಾಯಿ ಮಂಜೂರು ಮಾಡಿದರೂ ಕೂಡ ಅವನ 750 ರೂಪಾಯಿ ಅಸ್ಟೇ ಬರುತ್ತದೆ. ಮಧ್ಯೆ ಹಣ ಸ್ವಾಹಾ ಆಗುತ್ತದೆ. ಜಮೀನು ಇಲ್ಲದ ರೈತರು ಕೂಲಿ ಕೆಲಸ ಮಾಡಿ ಜೀವನ ಮಾಡಬೇಕಾದ ಸಂದರ್ಭ ಬಂದಿದೆ. ಕೆರೆಗಳನ್ನು ಕಟ್ಟಿಸುವ ಕೆಲಸ ತೆಗೆದುಕೊಂಡು, ರಸ್ತೆ ಬಾವಿ ಕೆಲಸ ತೆಗೆದುಕೊಂಡು ಅಂಥವರಿಗೆ ತಕ್ಷಣ ಕೂಲಿ ಕೆಲಸ ಒದಗಿಸಿ ಕೊಡಬೇಕು. ಇದಲ್ಲದೆ ದನಗಳಿಗೆ ತಿನ್ನುವುದಕ್ಕೆ ಮೇವು ಇರ್ಲಾ. ಆದುದರಿಂದ ಹಣದ ರೂಪದಲ್ಲಿ ಹಂಚುವುದಕ್ಕಿಂತ ದವಸ ಧಾನ್ಯದ ರೂಪದಲ್ಲಿ ಹಂಚುವುದು ಸೂಕ್ತ ಎಂದು ನನ್ನ ಭಾವನೆ.

(ಶ್ರೀಮತಿ ಜಿ. ಸಿ. ಭಾಗೀರಥಮ್ಮ)

ಕಾಳ ನಂತೆ ಮೂಲಕ ತಂದು ಆಹಾರ ಧಾನ್ಯಗಳ ಬೆಲೆ ಮುಗಿಲು ಮುಟ್ಟಿದೆ. ಆಹಾರ ಧಾನ್ಯಗಳು ನ್ಯಾಯವಾದ ಬೆಲೆಗೆ ದೊರೆಯುವಂತೆ ಮಾಡಬೇಕು. ನುಗ್ಗಿ ಕಾಲದಲ್ಲಿ ಬೆಲೆ ಕಡಿಮೆ ಇರುವುದರಿಂದ ಆಗ್ಗೆ ತಾಲ್ಲೂಕು ಮಟ್ಟದಲ್ಲಿ ಆಹಾರ ಧಾನ್ಯ ಶೇಖರಣೆ ಮಾಡಿದರೆ ಬೆಲೆಯನ್ನು ಹತೋಟಿಗೆ ತರಬಹುದು ಮತ್ತು ನಾಗಪ್ಪು ಧಾನ್ಯವನ್ನು ಆಯಾ ತಾಲ್ಲೂಕುಗಳಲ್ಲೇ ಯಾವುದೊಂದೂ ಟ್ರಾನ್ಸ್ಪೋರ್ಟೇಷನ್ ಚಾರ್ಜಿಸ್ ಅದರ ಮೇಲೆ ಬಿದ್ದು ಬೆಲೆ ಏರದಂತೆ ತಡೆಗಟ್ಟಿ ವ್ಯಾಪಾರ ಮಾಡಬಹುದೆಂದು ನನ್ನ ಅಭಿಪ್ರಾಯ. ಕಾಳ ನಂತೆಯಲ್ಲಿ ವ್ಯಾಪಾರ ಮಾಡಿ ಹೆಚ್ಚು ಲಾಭ ಪಡೆಯುವ ಉದ್ದೇಶದಿಂದ ಶೇಖರಣೆ ಮಾಡಿ ಇಟ್ಟುಕೊಂಡಿರುವ ಆಹಾರ ಧಾನ್ಯವನ್ನು ಹೊರಗೆ ತೆಗೆಯುವಂತೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕಾದುದು ಅಗತ್ಯವಾದುದು. ಇತ್ತೀಚೆಗೆ ಕಾಂಟೂರ್ ಬಂಡಿಂಗ್, ಕೆಲಸ ಹೆಚ್ಚಿಟ್ಟು ತೆಗೆದುಕೊಳ್ಳಬೇಕು. [Department ನಿಂದ ಮಾಡಿಸುವ ಕಾಂಟೂರ್ ಬಂಡಿಂಗ್ ಕೆಲಸಕ್ಕೆ 30 ಪರ್ಸೆಂಟು ಸಬ್‌ಸಿಡಿ ಕೊಡುತ್ತಿದ್ದಾರೆ. ಆದರೆ ನಮ್ಮ ತಾಲ್ಲೂಕಿನಲ್ಲಿ ಇದನ್ನು ಕೊಡುತ್ತಾ ಇಲ್ಲ. ಏತಕ್ಕೆ ಕೊಡುತ್ತಾ ಇಲ್ಲ ಎಂಬುದು ಅರ್ಥವಾಗುವುದಿಲ್ಲ. 30 ಪರ್ಸೆಂಟ್ ಸಬ್‌ಸಿಡಿ ಕೊಟ್ಟು ಕಾಂಟೂರ್ ಬಂಡಿಂಗ್ ಮಾಡಿಸಿದರೆ ಜಮೀನು ಉತ್ಪಾದಕವಾಗುತ್ತದೆ. ಅಲ್ಲದೆ ರೈತರಿಗೆ ಅನುಕೂಲವಾಗುತ್ತದೆ. ಇದಕ್ಕೆ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ ಒಂದು ಮಾತು ಹೇಳುತ್ತೇನೆ. ಅಭಾವ ಪರಿಸ್ಥಿತಿ ಮೂಲಕ ರೈತರು ಬಹಳ ತೊಂದರೆಯಲ್ಲಿ ಇರುವುದರಿಂದ ಕಂದಾಯ ಕೊಡಲು ಅನುಕೂಲವಿಲ್ಲ. ಆದುದರಿಂದ ಕಂದಾಯ ವಸೂಲಿಯಲ್ಲಿ ಸ್ವಲ್ಪ ರಿಯಾಯಿತಿ ಕೊಡಬೇಕು ಎಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಮಾತು ಮುಗಿಸುತ್ತೇನೆ.

Mr. SPEAKER.—The house will now adjourn to meet again tomorrow at Twelve O'clock.

---

*The House adjourned at Five Minutes past Six of the Clock to meet again at Twelve of the Clock on Thursday the 2nd July 1964.*

---

WD 3303—GPB—900—3-10-1964